KA / BG-GPO / 2515 / WPP-47 / 2006-2008



# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು


| ಸಂಪುಟ ೧೪೩ | ಬೆಂಗಳೂರು, ಗುರುವಾರ, ಅಕ್ಟೋಬರ್ ೧೬, ೨೦೦೮ (ಆಶ್ವಯುಜ ೨೪, ಶಕ ವರ್ಷ ೧೯೩೦) | ಸಂಚಿಕೆ ೪೧ |
| --- | --- | --- |


## ಭಾಗ – ೫

## ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

**OFFICE OF THE DIRECTOR, DEPARTMENT OF MINES & GEOLOGY**

**No.49, Khanija Bhavan, Devaraj urs Road, (Race Course Road), Bangalore-560 001**

**TENDER-CUM-AUCTION NOTICE**

**NOTIFICATION NO. DMG/STS/VHL-1/2008-09, DATED: 16TH SEPTEMBER 2008**

It is notified for information of the General Public that the Department of Mines & Geology, Government of Karnataka, has proposed to dispose of the following unserviceable old vehicles, tractors, trailors, old tyres, tubes and old batteries parked in the premises of Central workshop, Ingaldal, Chitradurga district on "as is and where is basis" through tender-cum-public auction on 05.11.2008 at 11.00 AM at Central workshop, Ingaldal, Chitradurga.

| Sl. No. | Lot No. | Vehicle No. | Make | Model No. | EMD Amount |
| --- | --- | --- | --- | --- | --- |
| 1. | 1 | CAG 1130 | TATA HGV | 1983 | 3000-00 |
| 2. | 2 | CAI 1135 | TATA HGV | 1983 | 3000-00 |
| 3. | 3 | CAI 4453 | STANDARD VAN | 1983 | 3000-00 |
| 4. | 4 | CAG 653 | MAHENDRA JEEP | 1983 | 3000-00 |
| 5. | 5 | MYA 3528 | MAHENDRA VAN | 1970 | 3000-00 |
| 6. | 6 | MEO 9029 | MAHENDRA JEEP | 1969 | 3000-00 |
| 7. | 7 | MYA 7716 | HMV FARGO LORRY | 1975 | 3000-00 |
| 8. | 8 | MYA 782 | ESCORT POPULAR TRACTOR | 1969 | 3000-00 |
| 9. | 9 | MEB 5450 | INTERNATIONAL TRACTOR | 1971 | 3000-00 |
| 10. | 10 | MEB 5449 | INTERNATIONAL TRACTOR | 1971 | 3000-00 |
| 11. | 11 | MYA 783 | TRACTOR TRAILOR | 1969 | 1000-00 |
| 12. | 12 | MYA 3863 | TRACTOR TRAILOR | 1971 | 1000-00 |
| 13. | 13 | CAG 1530 | JEEP TRAILOR | 1985 | 1000-00 |
| 14. | 14 | CAG 1580 | JEEP TRAILOR | 1984 | 1000-00 |

| Sl. No. | Lot No. | Vehicle No. | Make | Model No. | EMD Amount |
|---|---|---|---|---|---|
| 15. | 15 | CAG 1891 | JEEP TRAILOR | 1985 | 1000-00 |
| 16. | 16 | CAG 1892 | JEEP TRAILOR | 1985 | 1000-00 |
| 17. | 17 | 1 No. | JEEP TRAILOR | 1983 | 1000-00 |
| 18. | 18 | 1 No. | JEEP TRAILOR | 1983 | 1000-00 |
| 19. | 19 | 1 No. | JEEP TRAILOR | 1983 | 1000-00 |
| 20. | 20 | 1 No. | JEEP TRAILOR | 1983 | 1000-00 |
| 21. | 21 | 275 No's | Assorted old tyres and tubes | | 3000-00 |
| 22. | 22 | 10 No's | Assorted old batteries | | 3000-00 |

1) The General public who intend to file sealed tenders may inspect these vehicles and other items as per the above at central workshop, Ingaldal, Chitradurga between 10-30 Am to 5-00 Pm on the working days from 20.10.2008 to 02.11.2008. They are required to file separate tender for each one of the vehicles duly superscribing on the sealed covers the vehicle number etc., Tender forms can be obtained from the office of the Director, Department of Mines & Geology, Khanija Bhavan, Bangalore on all working days upto 4-00 pm from 20.10.2008 to 02.11.2008 on payment of the prescribed tender fee of Rs.100-00 (not refundable) + taxes applicable as per rules.
2) The closed / sealed tender will be received in the office of the Director, Department of Mines & Geology, Khanija Bhavan, Devraj urs road, Bangalore-560001 up to 4.00 Pm from 21.10.2008 to 03.11.2008.
3) The intending tenderers shall enclose a demand draft drawn in favour of 'Director of Mines & Geology' Bangalore for Rs.3000-00 or Rs.1000-00 as per prescribed EMD for each lot separately along with the tender as shown above. The vehicles No. in respect of the tender submitted must be typed / written legibly on the sealed tender and also the envelope.
4) Those desirous of participating in public auction shall deposit the said amount of Rs.3000-00 or Rs.1000-00 as per prescribed EMD for each lot separately submit to the officer who conducting the auction prior to the commencement of the auction either in cash or demand draft in favour of the 'Director of Mines & Geology' Bangalore and obtain an acknowledgement after paying the Rs.100 as participation charges (not refundable). In case the person who has submitted the sealed tender desires to participate in the public auction he too shall pay prescribed EMD and participation charges (not refundable). on the spot (through DD or cash) and participate in the auction.
5) The vehicles proposed for disposal will first be allowed for open auction bid one by one. The highest bid by open auction will be tallied with the offer in the sealed tender which will be opened on completion of open auction proceedings. The highest bidder in auction/ tender shall be the successful bidder.
6) The successful bidder shall remit the 25% of the bid amount along with applicable taxes immediately on the close of auction. The successful bidder shall on the receipt of the approval of the department take delivery of the vehicle paying all dues within 15 days. If he fails to pay the balance amount within 15 days all the amount deposited by the successful bidder shall be forfeited to government and the next highest bidder/ tenderer (whose EMD will have been retained till that time) shall be asked to take delivery of the vehicle after making full bid amount.
7) In case the second highest bidder / tenderer fails to take delivery of the vehicle within the stipulated time of further 15 days, his EMD shall also be forfeited to Government.

8) The EMD paid by the unsuccessful bidders, except the above first and second highest bidders/ tenderers will be refunded immediately after the close of the auction.
9) For transfer of documents of auctioned vehicle 12.5% tax is applicable on bid amount. In case scrap 4% tax is applicable as per rules.
10) Vehicles will be delivered only after the transfer of documents to concerned bidder.
11) The Director of Mines & Geology reserves the rights to accept or reject any or all offers/tender without assigning any reasons thereof.

P.R. 513 Director

**ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ**

**ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು**

**ಟೆಂಡರ್ ಪ್ರಕಟಣೆ**

**ಸಂಖ್ಯೆ:8:ಜಿಎನ್‌ಎಲ್:ಟಿ.ಎನ್‌ಡಿ(4):2008–09:ಎಇ–1, ದಿನಾಂಕ: 17ನೇ ಸೆಪ್ಟೆಂಬರ್ 2008**

ಈ ಕೆಳಕಂಡ ಕಾಮಗಾರಿಗಳಿಗೆ ಪ್ರತ್ಯೇಕ ಮೊಹರಾದ ಟೆಂಡರುಗಳನ್ನು ದ್ವಿಪ್ರತಿಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕೆಲಸದ ಹೆಸರನ್ನು ಮೊಹರಾದ ಲಕೋಟೆಯ ಮೇಲೆ ನಮೂದಿಸಿದ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ದಿನಾಂಕ: 21.10.2008 ರಂದು ಸಂಜೆ:4.00 ಗಂಟೆಯವರೆಗೆ ಟೆಂಡರುಗಳನ್ನು ಸ್ವೀಕರಿಸುವರು.

ಖಾಲಿ ಟೆಂಡರು ಫಾರಂಗಳ ಅರ್ಜಿಗಳನ್ನು ನಿಗದಿಪಡಿಸಿದ ಬೆಲೆಯೊಂದಿಗೆ (ಇದನ್ನು ಹಿಂತಿರುಗಿಸುವುದಿಲ್ಲ) ಮತ್ತು ನಿಗದಿಪಡಿಸಿದ ಇ.ಎಂ.ಡಿಯೊಂದಿಗೆ ದಿನಾಂಕ: 20.10.2008ರ ವರೆಗೆ ಕೆಲಸದ ಎಲ್ಲಾ ದಿನಗಳಂದು ಕಛೇರಿ ವೇಳೆಯಲ್ಲಿ ಸ್ವೀಕರಿಸಲಾಗುವುದು. ಗುತ್ತಿಗೆದಾರರು ರಿಜಿಸ್ಟ್ರೇಷನ್ ಸರ್ಟಿಫೈಡ್ ಪ್ರತಿ ಹಾಗೂ ಈ ತರಹದ ಕಾಮಗಾರಿಗಳನ್ನು ಕೈಗೊಂಡ ಬಗ್ಗೆ ಅನುಭವ ಪತ್ರವನ್ನು ಸಲ್ಲಿಸತಕ್ಕದ್ದು. ಖಾಲಿ ಟೆಂಡರು ಫಾರಂಗಳನ್ನು ದಿನಾಂಕ: 20.10.2008ರ ಸಂಜೆ:5.30ರ ತನಕ ನೀಡಲಾಗುವುದು.

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) | ಗುತ್ತಿಗೆದಾರರ ಅರ್ಹತೆ | ಇ.ಎಂ.ಡಿ ಠೇವಣಿ (ರೂ.ಗಳಲ್ಲಿ) | ಟೆಂಡರು ಅವಧಿ (ಮಳೆಗಾಲ ಹೊರತುಪಡಿಸಿ) | ಟೆಂಡರು ನಮೂನೆ | ಟೆಂಡರು ಫಾರಂ ಬೆಲೆ (ರೂ.ಗಳಲ್ಲಿ) |
|---|---|---|---|---|---|---|---|
| 1. | **ಲೆಕ್ಕ ಶೀರ್ಷಿಕೆ 4059 ಪ್ರಾದೇಶಿಕ ಸಾರಿಗೆ** ಪುತ್ತೂರು ತಾಲ್ಲೂಕಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಕಟ್ಟಡಕ್ಕೆ ನೀರು ಸರಬರಾಜು ಹಾಗೂ ನೈರ್ಮಲೀಕರಣ ವ್ಯವಸ್ಥೆ ಅಳವಡಿಸುವ ಕಾಮಗಾರಿ (2ನೇ ಕರೆ) | 10.00 | ಮೂರನೇ ದರ್ಜೆ ಮತ್ತು ಮೇಲ್ಪಟ್ಟು | 25,000.00 | 4 ತಿಂಗಳು (ಮಳೆಗಾಲ ಸೇರಿ | ದರವಾರು | 1650.00 |

**ಸೂಚನೆಗಳು:–**

1. ಉದ್ದೇಶಿಸಿರುವ ಕಾಮಗಾರಿಯ ಶೇ. 30ರಷ್ಟು ಮೊತ್ತದ ಇದೇ ತರಹದ ಕಾಮಗಾರಿಯನ್ನು ಕಳೆದ 5 ವರ್ಷಗಳ ಅವಧಿಯ ಒಂದು ಆರ್ಥಿಕ ವರ್ಷದಲ್ಲಿ ಪೂರೈಸಿರತಕ್ಕದ್ದು.
2. ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಯವರು ಹೊಂದಿರುತ್ತಾರೆ.
3. ಇ.ಎಂ.ಡಿ.ಯನ್ನು ಪ್ಲೆಜ್ಡ್ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್ / ರಾಷ್ಟ್ರೀಕೃತ ಯಾ ಶೆಡ್ಯೂಲ್ ಬ್ಯಾಂಕಿನಿಂದ ಪಡೆದ ಕಾಲ್ ಡಿಪೋಸಿಟ್ ರಶೀದಿ/ ಬ್ಯಾಂಕಿನ ನಿರಖು ಠೇವಣಿ ರೂಪದಲ್ಲಿ ಸಲ್ಲಿಸುವುದು. ನಿಗದಿಪಡಿಸಿದ ಮುಂಗಡ ಠೇವಣಿಯೊಂದಿಗೆ ಸಲ್ಲಿಸದ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
4. ಗುತ್ತಿಗೆದಾರರು ಕೆಲಸವನ್ನು ನಿಗದಿತ ಸಮಯದಲ್ಲಿ ಮಾಡಿ ಮುಗಿಸತಕ್ಕದ್ದು, ತಪ್ಪಿದಲ್ಲಿ ನಿಯಮದಂತೆ ದಂಡವನ್ನು ವಿಧಿಸಲಾಗುವುದು.
5. ಗುತ್ತಿಗೆದಾರರು ಟೆಂಡರು ಬಗ್ಗೆ ಅರ್ಜಿ ಸಲ್ಲಿಸುವಾಗ ಈ ತರಹದ ಕೆಲಸವನ್ನು ಕೈಗೊಂಡವರಾಗಿದ್ದು ಅನುಭವ ಪತ್ರವನ್ನು ಸಕ್ಷಮ ಅಧಿಕಾರಿಯವರಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
6. ಕಾಮಗಾರಿಗೆ ಬೇಕಾದ ಸಿಮೆಂಟ್, ಮತ್ತು ಇನ್ನಿತರ ಎಲ್ಲಾ ಸಾಮಾಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು ಹಾಗೂ ಇದನ್ನು ಸಕ್ಷಮ ಅಧಿಕಾರಿಯವರಿಂದ ಪರೀಕ್ಷೆ ಪಡೆದು ಫಲಿತಾಂಶವು ಐ.ಎಸ್.ಐ. ಗುಣವನ್ನು

ಖಚಿತಪಡಿಸಿ ಕೆಲಸಕ್ಕೆ ಉಪಯೋಗಿಸತಕ್ಕದ್ದು. ಈ ಅಂಶವನ್ನು ಗುತ್ತಿಗೆದಾರರು ಟೆಂಡರನ್ನು ಸಲ್ಲಿಸುವಾಗ ಗಮನಿಸುವುದು.

7. ಯಶಸ್ವಿ ಟೆಂಡರುದಾರರು ನಿರ್ವಹಿಸುವ ಕಾಮಗಾರಿಯ ಮೊತ್ತ 1%ರಷ್ಟನ್ನು ಲೇಬರ್ ಸೆಸ್‌ನ್ನಾಗಿ ಸರಕಾರಿ ಆದೇಶ ಸಂ. ಯುಯಲ್‌ಡಿ:3:ಎಲ್‌ಇಡಿ 2006:ಬೆಂಗಳೂರು: ದಿನಾಂಕ: 18.1.2007ರಂತೆ ಪಾವತಿಸತಕ್ಕದ್ದು.

ಕಾರ್ಯನಿರ್ವಾಹಕ ಇಂಜಿನಿಯರ್,
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು.

ಪಿ.ಆರ್. 520

## ಪೊಲೀಸ್ ಇಲಾಖೆ

## ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಕಛೇರಿ ಕರ್ನಾಟಕ ರಾಜ್ಯ, ಬೆಂಗಳೂರು

## ಮರುಟೆಂಡರ್ ಪ್ರಕಟಣೆ

**ನಂ.ಸಿ.ಟಿ.ಆರ್.ಎಸ್.1/27/2008–09, ದಿನಾಂಕ: 1ನೇ ಅಕ್ಟೋಬರ್ 2008**

ಸಂಗ್ರಹಣಾ ಸಂಸ್ಥೆ :– ಪೊಲೀಸ್ ಮಹಾ ನಿರೀಕ್ಷಕರು / ಆಯುಕ್ತರು ಸಂಚಾರ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು.

ಯೋಜನೆ ವಿವರ :– ಪೊಲೀಸ್ ಆಧುನೀಕರಣ ಯೋಜನೆ 2008–09

ಈ ಕಛೇರಿಯ ಟೆಂಡರ್ ಸಮಸಂಖ್ಯೆ ದಿನಾಂಕ: 24.06.2008 ರಂದು ಪೊಲೀಸ್ ಇಲಾಖೆಗೆ ಅಗತ್ಯವಾಗಿ ಬೇಕಾಗಿರುವ 4 ಇಂಟರ್‌ಸೆಪ್ಟರ್ ವಾಹನಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಲಾಗಿತ್ತು. ಈ ಟೆಂಡರನ್ನು ತಾಂತ್ರಿಕತೆಯ ಟೆಂಡರ್ ದೋಷದಿಂದ ರದ್ದುಪಡಿಸಿ ಮರುಟೆಂಡರ್ ಕರೆಯಲಾಗಿದೆ. ಮರುಟೆಂಡರ್ ಪ್ರಕಟಣೆಯ ವಿವರವು ಈ ಕೆಳಕಂಡಂತೆ ಇರುತ್ತದೆ.

ಪೊಲೀಸ್ ಇಲಾಖೆಗೆ ಅಗತ್ಯವಾಗಿ ಬೇಕಾಗಿರುವ 8 ಇಂಟರ್‌ಸೆಪ್ಟರ್ ವಾಹನಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮ 2000ರ ಪ್ರಕಾರ ಮೊಹರು ಮಾಡಿರುವ ದರ ಪಟ್ಟಿಗಳನ್ನು ದ್ವಿಲಕೋಟೆ ಪದ್ದತಿಯಲ್ಲಿ ಆಹ್ವಾನಿಸಲಾಗಿದೆ. ವಿವರ ಮತ್ತು ಷರತ್ತುಗಳನ್ನೊಂಡ ಟೆಂಡರ್ ಅರ್ಜಿಯನ್ನು ನಿರ್ದಿಷ್ಟತೆಗಳೊಂದಿಗೆ (ಸ್ಪೆಶಿಫಿಕೇಶನ್) ದಿನಾಂಕ: 20.10.2008 ರ ಸಾಯಂಕಾಲ 4 ಗಂಟೆಯೊಳಗಾಗಿ ಪೊಲೀಸ್ ಮಹಾ ನಿರೀಕ್ಷಕರು/ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು ರವರಿಗೆ ಟೆಂಡರ್ ಸಲ್ಲಿಸಬಹುದು.

ಟೆಂಡರ್‌ದಾರರು ಟೆಂಡರ್ ಅರ್ಜಿಯನ್ನು ಮೊಹರು ಮಾಡಿದ 2 ಪ್ರತ್ಯೇಕ ಕವರ್‌ಗಳಲ್ಲಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. 1ನೇ ಕವರ್‌ನಲ್ಲಿ ಟೆಂಡರ್‌ದಾರರು ಅವರುಗಳು ಹೊಂದಿರುವ ಅನುಭವ, ಕಾರ್ಯದ ವಿಧಾನ, ವಾರ್ಷಿಕ ವಹಿವಾಟು, ಆರ್ಥಿಕತೆ, ಆದಾಯ ತೆರಿಗೆ ಮತ್ತು ವಾಣಿಜ್ಯ ತೆರಿಗೆ ಪಾವತಿಯ ಮಾಹಿತಿಯನ್ನು ಮತ್ತು ಇದರ ಜೊತೆಗೆ ಪೂರೈಕೆಗಾಗಿ ಹೊಂದಿರುವ ಆರ್ಥಿಕ ಸಾಮರ್ಥ್ಯವನ್ನು ತಿಳಿಸಿ ಜೊತೆಗೆ ಒಟ್ಟು 3,36,000–00 ಭದ್ರತಾ ಠೇವಣಿಯ (ಇ.ಎಂ.ಡಿ) ಡಿ.ಡಿ. ಯನ್ನು ಲಗತ್ತಿಸಿ 1ನೇ ಕವರ್ ಮೇಲ್ಭಾಗದಲ್ಲಿ "ತಾಂತ್ರಿಕ ಟೆಂಡರ್" ಎಂದು ಮೊಹರಾದ ಟೆಂಡರ್‌ನ್ನು ಸಲ್ಲಿಸುವುದು.

2ನೇ ಕವರ್‌ನಲ್ಲಿ ಮಾದರಿಗನುಸಾರವಾಗಿ ಧರಖಾಸ್ತು ಸಹಿತ ಟೆಂಡರ್‌ನ್ನು ಭರ್ತಿ ಮಾಡಿ ಟೆಂಡರ್‌ನ್ನು ಸಲ್ಲಿಸುವುದು. ಈ ಎರಡು ಟೆಂಡರ್‌ಗಳನ್ನು ಮುದ್ದಾಂ ಆಗಲಿ ಅಥವಾ ನೊಂದಾಯಿತ ಅಂಚೆಯಲ್ಲಿಯಾಗಲಿ ಕಳುಹಿಸಿ ನಿಗದಿತ ಸಮಯ ದಿನಾಂಕ:20.10.08 ರ ಸಂಜೆ (ನಾಲ್ಕು) 4–00 ಗಂಟೆಯೊಳಗಾಗಿ ಪೊಲೀಸ್ ಮಹಾ ನಿರೀಕ್ಷಕರು/ ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ, ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಕಛೇರಿ, 2ನೇ ಮಹಡಿ, ಬೆಂಗಳೂರು ಇವರಿಗೆ ಸ್ವೀಕೃತಿಯಾಗುವಂತೆ ಕಳುಹಿಸುವುದು. ಹಾಗೂ ಸ್ವೀಕೃತಿಯಾದ ಕುರಿತು ಸ್ವೀಕೃತಿಯನ್ನು ಪಡೆದು ಕೊಂಡಿರಬೇಕು. ಅವಧಿ ಮೀರಿ ಸ್ವೀಕೃತಿಗೊಳ್ಳುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಅಂಚೆ ಅಥವಾ ಕೊರಿಯರ್ ಮೂಲಕ ಬರುವ ಟೆಂಡರ್‌ಗಳಿಗೆ ನಿಗದಿತ ಅವಧಿ ಮೀರಿ ಬರುವುದಾಗಲಿ ರವಾನೆಯಲ್ಲಿ ತಡವಾದ ಕುರಿತಾಗಲಿ ಆಗುವ ವಿಳಂಬಕ್ಕೆ ಈ ಕಛೇರಿ ಮತ್ತು ಇಲಾಖೆಯವರು ಜವಾಬ್ದಾರಿಯಾಗಿರುವುದಿಲ್ಲ.

1) ಟೆಂಡರ್ ಫಾರ್ಮನ್ನು ಪಡೆಯುವ ದಿನಾಂಕ – 10.10.2008 ರಿಂದ 20.10.2008 ರ ಸಂಜೆ 4 ಗಂಟೆಯವರೆಗೆ

2) ಟೆಂಡರ್ ಫಾರಂನ ಬೆಲೆ 1ಕ್ಕೆ ರೂ. – 500–00 (ಐದು ನೂರು ಮೊತ್ತ)

ಟೆಂಡರ್ ಫಾರಂನ್ನು ಪಡೆಯವವರು ರೂ. 500–00 ರ ಡಿ.ಡಿ.ಯನ್ನು ಪೊಲೀಸ್ ಮಹಾ ನಿರೀಕ್ಷಕರು/ ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ ರವರ ಹೆಸರಿಗೆ ತೆಗೆದು ಆ ಡಿ.ಡಿಯನ್ನು ಪೊಲೀಸ್ ಮಹಾ ನಿರೀಕ್ಷಕರು/ ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ ರವರಿಗೆ ಸಲ್ಲಿಸಿ ಅರ್ಜಿಯನ್ನು ಪಡೆಯಬಹುದು. ಈ ಮೊತ್ತವು ವಾಪಾಸಾತಿಯ

ಮೊತ್ತವಾಗಿರುವುದಿಲ್ಲ. ಟೆಂಡರ್ ಫಾರಂನಲ್ಲಿ ಟೆಂಡರ್ ಸಂಬಂಧಿತ ನಿಬಂಧನೆಗಳು ಹಾಗೂ ಮೊಬೈಲ್ ಇಂಟರ್‌ಸೆಪ್ಟರ್ ವಾಹನದ ನಿರ್ಧಿಷ್ಟತೆಯನ್ನು (ಸ್ಪೆಶಿಫಿಕೇಶನನ್ನು) ಒಳಗೊಂಡಿರುತ್ತದೆ. ಟೆಂಡರ್ ಅರ್ಜಿಯನ್ನು ಪಡೆಯಲು ನಗದನ್ನಾಗಲಿ ಹಾಗೂ ಚೆಕ್ಕಗಳನ್ನಾಗಲಿ ಸ್ವೀಕರಿಸಲಾಗುವುದಿಲ್ಲ. ಅಂಚೆ ಮೂಲಕ ಟೆಂಡರ್ ಅರ್ಜಿಯನ್ನು ಪಡೆಯಲು ಇಚ್ಛಿಸುವವರು 9" x 12" ಅಳತೆಯ ಸ್ವವಿಳಾಸದ ರೂ. 35–00 ಗಳ ಅಂಚೆ ಚೀಟಿಯನ್ನು ಲಗತ್ತಿಸಿದ ಒಂದು ಲಕೋಟೆಯೊಂದಿಗೆ 500/– ಗಳ ಡಿ.ಡಿಯನ್ನು ಕಳುಹಿಸಿ ಟೆಂಡರ್ ಫಾರಂಗಳನ್ನು ಪಡೆದುಕೊಳ್ಳಬಹುದು.

ಟೆಂಡರ್‌ದಾರರು ತಾವುಗಳು ಸಲ್ಲಿಸುವ ಮುಂಗಡ ಹಣ 3,36,000–00 ರೂ. ಗಳನ್ನು ಪೊಲೀಸ್ ಮಹಾ ನಿರೀಕ್ಷಕರು/ ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ ರವರ ಹೆಸರಿಗೆ ಡಿ.ಡಿಯನ್ನು ತೆಗೆದು ಟೆಂಡರ್ ಅರ್ಜಿಯ ಜೊತೆಗೆ ಲಗತ್ತಿಸಿರಬೇಕು. ಮುಂಗಡ ಠೇವಣಿ (ಇ.ಎಂ.ಡಿ) ಇಲ್ಲದ ಟೆಂಡರ್‌ಗಳನ್ನು ಹಾಗೂ ಡಿ.ಡಿ.ಯನ್ನು ಹೊರತುಪಡಿಸಿ ಚೆಕ್ಕುಗಳನ್ನಾಗಲಿ ಮತ್ತು ಇತರೆ ಯಾವುದೇ ಗ್ಯಾರಂಟಿಯ ಪತ್ರಗಳನ್ನಾಗಲೀ ಅಂಗೀಕರಿಸಲಾಗುವುದಿಲ್ಲ.

ಸ್ವೀಕರಿಸಿದ ಟೆಂಡರ್‌ನ್ನು ದಿನಾಂಕ: 23.10.2008 ರ ಸಂಜೆ ನಾಲ್ಕು ಗಂಟೆಗೆ ಮಾನ್ಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕಾನೂನು ಮತ್ತು ಸುವ್ಯವಸ್ಥೆ ರವರ ಕಛೇರಿಯಲ್ಲಿ ತೆರೆಯಲಾಗುವುದು. ಇಚ್ಛೆಯುಳ್ಳ ಟೆಂಡರ್‌ದಾರರು ಟೆಂಡರ್ ಪ್ರಕ್ರಿಯೆಯ ಸಮಯದಲ್ಲಿ ಭಾಗವಹಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಪೊಲೀಸ್ ಮಹಾ ನಿರೀಕ್ಷಕರು/ ಆಯುಕ್ತರು, ಸಂಚಾರ ಮತ್ತು ರಸ್ತೆ ಸುರಕ್ಷತೆ ರವರನ್ನು ಕಛೇರಿಯ ಕಾರ್ಯದ ಸಮಯದಲ್ಲಿ ಸಂಪರ್ಕಿಸಬಹುದು.

ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್
ಮತ್ತು ಆಯುಕ್ತರು ಸಂಚಾರ ಮತ್ತು ರಸ್ತೆ ಸುರಕ್ಷತೆ,
ಕರ್ನಾಟಕ ರಾಜ್ಯ, ಬೆಂಗಳೂರು.

**POLICE DEPARTMENT**

**Office of the Director General and Inspector General of Police Karnataka State, Bangalore**

**RETENDER NOTIFICATION**

**No.CTRS.1/27/2008-09, Dated: 1st October 2008**

| | | |
|---|---|---|
| Procuring entity | : | Inspector General of Police and Commissioner for Traffic and Road Safety, Bangalore. |
| Name of the Project Scheme | : | Modernization of Police Department. |

As per this office Tender Notification of even No and dated 24/06/2008 for Purchase of four Interceptor Vehicles tender was called. But due to technical problem tender was cancelled and hence a re-tender is called. The detail are as follows.

Sealed tenders are invited for the supply of eight interceptor vehicles for Police Department.

Sealed tenders duly superscribed as "Tenders for supply of four Interceptors vehicles to Police Department" shall be submitted either by Registered post or in person addressed to the Inspector General of Police and commissioner for Traffic and Road Safety, Nrupathunga Road, Bangalore so as to reach on or before **date : 20.10.2008 by 4.00 pm.** Tender offer for supply of interceptor vehicles shall comply with the specifications enclosed at annexure to this tender notifications. The tender can submitted to all the items in the Interceptor as shown in the specifications.

The tenderer shall submit two covers. The first cover shall contain experience, Past performance in supply of interceptor vehicle, Financial status and capacity. The second cover shall contain the prices quoted by the tenderer. The tenderer shall superscribe on the first cover as **"Technical Tender"** and second cover as **"Financial bid"** In addition to this they should be superscribed as **"tender for supply of interceptor vehicles to Police department."** Only those agencies /bidders who have the technical expertise and capability to execute the contract independently and without the involvement of middle man, shall participate in the bid.

Tender forms containing detailed terms and conditions and specifications of the item to be supplied can be obtained from this office between 10.00 am to 4.00 pm on any working day between **date : 10.10.2008 to 20.10.2008.** The cost of each tender form is rupees 500-00 (five hundred only), payable by open D.D only in favour of Inspector General of Police and Commissioner for Traffic and Road safety Bangalore, which is nonrefundable (money order/Cash will not be accepted). The tenderer who desires to

obtain the tender form by post may send D.D for Rupees 500.00 drawn in favour of Inspector General of Police and Commissioner for Traffic and Road safety, Bangalore along with self addressed envelope of size 9x12 affixed in stamp of Rupees 35-00. Tender should be submitted in duplicate in sealed envelope duly superscribed as stated above and address of the firm below. Envelope should contain duly filled tender applications along with D.D drawn in favour of Inspector General of Police and Commissioner for Traffic and Road safety, Bangalore, towards E.M.D. for Rs.3,36,000-00 and details of financial, technical service capability, Sales tax, income tax details, annual turn over details, brochures and catalogues with technical specifications.

Tender applications received after due date will not be considered. The tender envelope received will be opened in the office of Additional Director General of Police, Law and Order, Bangalore. On **23.10.2008 4.00 pm,** the authority will first open technical tender cover for evaluation and prepare a list of qualified tenderers. Thereafter second financial bid covers of those who are qualified will be opened. Tenderers may be present at the time of opening of tenders.

The tenders received without Earnest Money Deposit (E.M.D) except in the form of Demand Draft shall be rejected. The department will not be responsible for any delay/loss/damage/ or non receipt of request/ tender documents/tender sent by post/courier etc., Department's right to accept /reject/ split/increase or decrease quantity any or all tenders without assigning any reasons is reserved.

In case the tender proceedings can't be held on the above dates due to unforeseen circumstances like holidays etc., the same will be held on the following dates at the same time.

Inspector General of Police and
Commissioner for Traffic and Road safety.
Karnataka State, Bangalore.

P.R. 522

**DEPARTMENT OF HORTICULTURE**

**Directorate of Horticulture Lalbagh, Bangalore-04**

**TENDER NOTIFICATION FOR ESTABLISHMENT OF COCONUT PROCESSING EQUIPMENTS**

**No: DH:PNC:AHO-2:14:2008-09, Dated: 6th October 2008**

Sealed Tenders are invited from the genuine manufacturers / authorized distributors for fabrication, supply, installation and commissioning of Coconut processing equipments / machinery for **Modern copra drier & Coconut Chips under the Technology Mission on Coconut Project at Javaranahalli Horticulture Farm, Mandya District.** The tender document can be obtained from the office of the Joint Director of Horticulture (Plantation Crops & Plant Protection), Lalbagh, by paying Rs.500/-. The tender form will be issued up to 20.10.2008 (12.00 Noon). The last date for receiving filled up tender is 21.10.2008 by 5.00 p.m. The tenderer shall deposit E.M.D. of Rs.1% of the value of contract in the form of D.D. along with prescribed tender form. The D.D. should be drawn in favour of Joint Director of Horticulture (Plantation Crops & Plant Protection), Lalbagh, Bangalore. The sealed tenders will be opened at the Directorate of Horticulture, Lalbagh, Bangalore-4 on 22.10.2008 at 11.00 A.M. Additional information if required can be obtained from the office of the Joint Director of Horticulture (Plantation Crops & Plant Protection), Lalbagh, Bangalore. Telephone No.080-26573790.

Director of Horticulture

**ತೋಟಗಾರಿಕೆ ಇಲಾಖೆ**

**ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು-04**

**ತೆಂಗು ಉತ್ಪನ್ನಗಳ ಸಂಸ್ಕರಣ ಘಟಕ ಸ್ಥಾಪನೆಗೆ ಟೆಂಡರ್ ಪ್ರಕಟಣೆ**

**ಸಂ:ತೋಇ:ತೋಬೆ:ಸತೋಅ-2:14:08-09, ದಿನಾಂಕ: 6ನೇ ಅಕ್ಟೋಬರ್ 2008**

ಮಂಡ್ಯ ಜಿಲ್ಲೆ, ಜವರನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ತೆಂಗು ಟೆಕ್ನಾಲಜಿ ಮಿಷನ್ ಯೋಜನೆಯಡಿ ತೆಂಗು ಉತ್ಪನ್ನಗಳ ಪ್ರಾತ್ಯಕ್ಷತೆ ಹಾಗೂ ತರಬೇತಿ ಕೇಂದ್ರ ಸ್ಥಾಪಿಸಲು Modern copra drier ಮತ್ತು Coconut Chips ಘಟಕಗಳಿಗೆ

ಉಪಕರಣಗಳನ್ನು ಸರಬರಾಜು ಮಾಡಲು ನೈಜ ಸರಬರಾಜುದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ನಿಗದಿತ ಟೆಂಡರ್ ಫಾರಂಗಳನ್ನು ತೋಟಗಾರಿಕೆ ಜಂಟಿ ನಿರ್ದೇಶಕರ ಕಛೇರಿ (ತೋಟದ ಬೆಳೆಗಳು & ಸಸ್ಯಸಂರಕ್ಷಣೆ), ಲಾಲ್‌ಬಾಗ್, ಬೆಂಗಳೂರು ಇಲ್ಲಿ ರೂ. 500/– ನಗದಾಗಿ ನೀಡಿ ದಿನಾಂಕ: 20.10.2008 ರವರೆಗೆ (12.00 ಗಂಟೆ) ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಮೊಹರಾದ ಲಕ್ಕೋಟೆಯನ್ನು ಹಿಂದಿರುಗಿಸಲು ಕೊನೆಯ ದಿನಾಂಕ:21.10.2008 ಸಂಜೆ 5.00 ಗಂಟೆಯ ಒಳಗೆ, ಟೆಂಡರ್‌ದಾರರು ನಿಗದಿತ ಟೆಂಡರ್ ಡಾಕ್ಯುಮೆಂಟ್ ಜೊತೆಗೆ ಒಟ್ಟು ಕೆಲಸಕ್ಕೆ ತಗಲುವ ಶೇ. 1 ರಷ್ಟು ಭದ್ರತಾ ಠೇವಣಿ ಹಣವನ್ನು ಡಿ.ಡಿ. ರೂಪದಲ್ಲಿ ತೋಟಗಾರಿಕೆ ಜಂಟಿ ನಿರ್ದೇಶಕರು, (ತೋಟದ ಬೆಳೆಗಳು & ಸಸ್ಯ ಸಂರಕ್ಷಣೆ) ಲಾಲ್‌ಬಾಗ್, ಬೆಂಗಳೂರು ರವರ ಹೆಸರಿನಲ್ಲಿ ಪಡೆದು ಲಗತ್ತಿಸಿ ಸಲ್ಲಿಸಬೇಕು. ಮೊಹರಾದ ಟೆಂಡರ್‌ಗಳನ್ನು ದಿನಾಂಕ: 22.10.2008 ರಂದು ಬೆಳಿಗ್ಗೆ 11.00 ಗಂಟೆಗೆ ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು, ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ತೋಟಗಾರಿಕೆ ಜಂಟಿ ನಿರ್ದೇಶಕರು, (ತೋಟದ ಬೆಳೆಗಳು & ಸಸ್ಯ ಸಂರಕ್ಷಣೆ) ಲಾಲ್‌ಬಾಗ್, ಬೆಂಗಳೂರು ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ:080–26573790

ಪಿ.ಆರ್. 525 ತೋಟಗಾರಿಕೆ ನಿರ್ದೇಶಕರು

## ಜಲ ಸಂಪನ್ಮೂಲ (ಸಣ್ಣ ನೀರಾವರಿ ಇಲಾಖೆ)

## ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೀದರ್

## ಟೆಂಡರ್ ದಿನಾಂಕ ವಿಸ್ತರಣೆಯ ಅಧಿಸೂಚನೆ

**ಸಂ:ಕಾನಿಇಂ:ಸನೀವಿ:ಬೀದರ್:ತಾಶಾ–3:2008/1546, ದಿನಾಂಕ: 24ನೇ ಸೆಪ್ಟೆಂಬರ್ 2008**

**ವಿಷಯ:**
1. ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಹೊಳ ಸಮುದ್ರ ಬಿಸಿಬಿ ನಿರ್ಮಾಣ ಕಾಮಗಾರಿ.
2. ಬೀದರ್ ಜಿಲ್ಲೆ ಬೀದರ್ ತಾಲ್ಲೂಕಿನ ಮರಕುಂದಾ ಗ್ರಾಮದ ಹತ್ತಿರ ಬಂದಾರ ನಿರ್ಮಾಣ ಕಾಮಗಾರಿ.
3. ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಮುಂಗನಾಳ ನಿರ್ಮಾಣ ಕಾಮಗಾರಿ.
4. ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಹೊಸ ಹುಡಗಿ ಬ್ಯಾರೇಜ ನಿರ್ಮಾಣ ಕಾಮಗಾರಿ.
5. ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಭೋಸಗಾ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣ ಕಾಮಗಾರಿ.

**ಉಲ್ಲೇಖ:**
1. ಈ ಕಛೇರಿಯ ಅಧಿಸೂಚನೆ ಸಂ:ಸನೀವಿ:ಬೀದರ್:ತಾ–5:ಟೆಂಡರ್:ಹೊಳಸಮುದ್ರ ಬಿಸಿಬಿ:2008–09:1294 ದಿನಾಂಕ: 16.08.2008.
2. ಈ ಕಛೇರಿಯ ಅಧಿಸೂಚನೆ ಸಂ:ಸನೀವಿ:ಬೀದರ್:ತಾ–5:ಟೆಂಡರ್:ಮರಕುಂದಾ:2008–09:1296 ದಿನಾಂಕ: 16.08.2008.
3. ಈ ಕಛೇರಿಯ ಅಧಿಸೂಚನೆ ಸಂ:ಸನೀವಿ:ಬೀದರ್:ತಾ–5:ಟೆಂಡರ್:ಮುಂಗನಾಳ:2008–09:1295 ದಿನಾಂಕ: 16.08.2008.
4. ಈ ಕಛೇರಿಯ ಅಧಿಸೂಚನೆ ಸಂ:ಸನೀವಿ:ಬೀದರ್:ತಾ–5:ಟೆಂಡರ್:ಹುಡಗಿಬ್ಯಾರೆಜ:2008–09:1297 ದಿನಾಂಕ:16.08.2008.
5. ಈ ಕಛೇರಿಯ ಅಧಿಸೂಚನೆ ಸಂ:ಸನೀವಿ:ಬೀದರ್:ತಾ–3:ಟೆಂಡರ್:ಭೋಸಗಾ:2008–09:1299 ದಿನಾಂಕ: 16.08.2008.

ಮೇಲಿನ ಕಾಮಗಾರಿಗಾಗಿ ಉಲ್ಲೇಖಿಸಿರುವ ಅಧಿಸೂಚನೆಯಲ್ಲಿ ಪ್ರಕಟಿಸಲಾದ ಟೆಂಡರ್ ದಿನಾಂಕಗಳು ಅನಿವಾರ್ಯ ಕಾರಣದಿಂದ ಈ ಕೆಳಗಿನಂತೆ ಮುಂದೊರಿಸಲಾಗಿದೆ.

| | | | |
|---|---|---|---|
| 1) | ಖಾಲಿ ಪ್ರೀಕ್ವಾಲಿಫಿಕೇಶನ್ ಟೆಂಡರ್ ದಸ್ತಾವೇಜುಗಳನ್ನು ಪಡೆಯಲು ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ | : | 25.10.2008 ಸಾಯಂಕಾಲ 5.30 ಗಂಟೆಯವರೆಗೆ |
| 2) | ಖಾಲಿ ಪ್ರಿಕ್ವಾಲಿಫಿಕೇಶನ್ ಟೆಂಡರ್ ದಸ್ತಾವೇಜುಗಳನ್ನು ನೀಡುವ ದಿನಾಂಕ: | : | 30.10.2008 ಸಾಯಂಕಾಲ 5.30 ಗಂಟೆಯವರೆಗೆ |
| 3) | ಭರ್ತಿ ಮಾಡಿದ ಮೊಹರಬಂದ ಪ್ರೀಕ್ವಾಲಿಫಿಕೇಶನ್ ಟೆಂಡರ್ ದಸ್ತಾವೇಜುಗಳನ್ನು ಸ್ವೀಕರಿಸಿರುವ ದಿನಾಂಕ: | : | 06.11.2008 ಸಾಯಂಕಾಲ 4.00 ಗಂಟೆಯವರೆಗೆ |
| 4) | ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ | : | 10.11.2008 11.00 ಗಂಟೆಗೆ |

ಉಳಿದೆಲ್ಲ ಅಂಶಗಳಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ.

ಕಾರ್ಯನಿರ್ವಾಹಕ ಅಭಿಯಂತರರು,
ಪಿ.ಆರ್. 526 ಸಣ್ಣ ನೀರಾವರಿ ವಿಭಾಗ, ಬೀದರ್.

**ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ತರಬೇತಿ)**
**ಮತ್ತು ಸದಸ್ಯ ಕಾರ್ಯದರ್ಶಿ, ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ನೇಮಕಾತಿ ಸಮಿತಿ, ಬೆಂಗಳೂರು – 560 001**
**ಸಂಖ್ಯೆ: 27/ನೇಮಕಾತಿ/2008–09, ದಿನಾಂಕ: ಸೆಪ್ಟೆಂಬರ್ 2008**

**ವಿಷಯ:** ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿವಿಲ್) / ಮಹಿಳಾ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಸೇವೆಯಲ್ಲಿರುವವರು ಒಳಗೊಂಡಂತೆ ಮತ್ತು ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ರಾಜ್ಯ ಗುಪ್ತವಾರ್ತೆ) ಹುದ್ದೆಗಳಿಗೆ ನೇರ ನೇಮಕಾತಿ ಕುರಿತು.

ಅಧಿಸೂಚನೆ ಸಂಖ್ಯೆ: 27/ನೇಮಕಾತಿ/2008–09, ದಿನಾಂಕ: 10.09.2008 ರನ್ವಯ 350 ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಸಿವಿಲ್) / ಮಹಿಳಾ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಸೇವೆಯಲ್ಲಿರುವವರು ಒಳಗೊಂಡಂತೆ ಮತ್ತು ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ರಾಜ್ಯ ಗುಪ್ತವಾರ್ತೆ) ಹುದ್ದೆಗಳಿಗೆ ನೇರ ನೇಮಕಾತಿ ಕುರಿತು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆದರೆ ಆಡಳಿತಾತ್ಮಕ ಕಾರಣಗಳಿಂದ ದಿನಾಂಕ: 10.09.2008 ರ ಅಧಿಸೂಚನೆಯನ್ನು ರದ್ದುಪಡಿಸಲಾಗಿದೆ.

ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್,
(ತರಬೇತಿ) ಮತ್ತು ಸದಸ್ಯ ಕಾರ್ಯದರ್ಶಿ,
ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ನೇಮಕಾತಿ ಸಮಿತಿ,
ಬೆಂಗಳೂರು – 560 001.

**Deputy Inspector General of Police, (Training)**
**and Member Secretary, PSIs Recruitment Committee, Bangalore-560 001**
**Notification No. 27/RECT/2008-09, dated: September 2008**

**Sub:** Recruitment to the posts of Police Sub-Inspector (Civil) / Women Police Sub-Inspector including In-service and Police Sub-Inspector (State Intelligence) - Reg.

In pursuance to the Notification No. 27/RECT/2008-09, dated: 10.09.2008 applications from eligible candidates by direct recruitment to 350 posts of Police Sub-Inspector (Civil)/ Women Police Sub-Inspector including In-service and Police Sub-Inspector (State Intelligence) were invited. Due to administrative reasons, the Notification dated: 10.09.2008 stands cancelled.

Deputy Inspector General of Police, (Training)
and Member Secretary, PSIs Recruitment
Committee, Bangalore-560 001.

P.R. 527

**FORM - IV**
**(See Rule 12)**
**NOTICE**

It is hereby notified that the undersigned has changed his/her name from **RADHA BAI .J.** to **RADHA GANESH CHITRAK**

P.D. 146 **RADHA BAI .J.**

[ನಮೂನೆ–1]
(9ನೇ ನಿಯಮ ನೋಡಿ)
**ಪೊಲೀಸ್ ಇಲಾಖೆ**
**ಪೊಲೀಸ್ ಅಧೀಕ್ಷಕರವರ ಕಛೇರಿ, ಶಿವಮೊಗ್ಗ.**
**ಅಧಿಸೂಚನೆ**

ಶ್ರೀ **ಎಸ್. ಲೋಕೇಶಪ್ಪ** ಸಿಹೆಚ್‌ಸಿ 468 ತೀರ್ಥಹಳ್ಳಿ ಪೊಲೀಸು ಠಾಣೆ, ಶಿವಮೊಗ್ಗ ಜಿಲ್ಲೆ ಇವರಿಗೆ ಅವರ ಮಕ್ಕಳ ವಿದ್ಯಾಭ್ಯಾಸದ ಸೌಲಭ್ಯಕ್ಕಾಗಿ ಮಾತ್ರ **ಎಸ್. ಲೋಕೇಶ್** ಎಂದು ಅವನ ಹೆಸರು ಬದಲಾವಣೆಗೆ ಅನುಮತಿ ನೀಡಲಾಗಿದೆ.

ಪೊಲೀಸ್ ಸೂಪರಿಂಟೆಂಡೆಂಟ್
ಶಿವಮೊಗ್ಗ ಜಿಲ್ಲೆ.

ಪಿ.ಡಿ. 147

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರರವರ ಕಛೇರಿ**

**ವಿವಿಧ ಫಸಲಿನ ಸಂಕ್ಷಿಪ್ತ ಟೆಂಡರ್ ಕಂ ಹರಾಜು ಪ್ರಕಟಣೆ**

**ಮರು ಟೆಂಡರ್ ಕಂ ಹರಾಜು ಪ್ರಕಟಣೆ**

**ಸಂಖ್ಯೆ: ಎ6/ಸೇಲ್ಸ್/ವಿವಿಧ ಫಸಲು/ಸಿಆರ್–25/2008–09, ದಿನಾಂಕ: 30ನೇ ಸೆಪ್ಟೆಂಬರ್ 2008**

**ವಿಷಯ:** ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸ್ಟೇಟ್ ಫಾರೆಸ್ಟ್ ಮೈನರ್ ಫಾರೆಸ್ಟ್ ಕಾಯ್ದಿಟ್ಟ ಮತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವ ಪ್ರದೇಶದಲ್ಲಿ ಹಾಗೂ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಸರಹದ್ದಿನವರೆಗೆ ದೊರೆಯುತ್ತಿರುವ 1) ಸಿಟ್ರಿಡೋರ ಎಲೆ ಫಸಲು. 2) ತೂಪ್ರ ಎಲೆ (ಬೀಡಿ ಎಲೆ) ಫಸಲು 3) ಹುಣಸೆ ಫಸಲು 4) ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿರುವ ಹುಣಸೆ ಫಸಲು 5) ಕಿರು ಅರಣ್ಯ ಉತ್ಪನ್ನ ಅಂದರೆ ಅರಳೆಕಾಯಿ, ಬೇಲದ ಹಣ್ಣು ನಲ್ಲಿಕಾಯಿಗಳ ಟೆಂಡರ್ ಹರಾಜು ಕುರಿತು

**ಉಲ್ಲೇಖ:** ಈ ಕಛೇರಿಯ ಬಹಿರಂಗ ಹರಾಜು ಪ್ರಕಟಣೆ ದಿನಾಂಕ: 20.08.2008.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ ರಾಮನಗರ ಪ್ರಾದೇಶಿಕ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸ್ಟೇಟ್ ಫಾರೆಸ್ಟ್ ಮೈನರ್ ಫಾರೆಸ್ಟ್ ಕಾಯ್ದಿಟ್ಟ ಮತ್ತು ಅರಣ್ಯ ಇಲಾಖೆಯ ಸ್ವಾಧೀನದಲ್ಲಿರುವ ಪ್ರದೇಶದಲ್ಲಿ ಹಾಗೂ ರಾಮನಗರ ಪ್ರಾದೇಶಿಕ ಅರಣ್ಯ ವಿಭಾಗದ ಸರಹದ್ದಿನವರೆಗೆ ದೊರೆಯುತ್ತಿರುವ 1) ಸಿಟ್ರಿಡೋರ ಎಲೆ ಫಸಲು. 2) ತೂಪ್ರ ಎಲೆ (ಬೀಡಿ ಎಲೆ) ಫಸಲು 3) ಹುಣಸೆ ಫಸಲು 4) ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿರುವ ಹುಣಸೆ ಫಸಲು 5) ಕಿರು ಅರಣ್ಯ ಉತ್ಪನ್ನ ಅಂದರೆ ಅರಳೆಕಾಯಿ, ಬೇಲದ ಹಣ್ಣು ನಲ್ಲಿಕಾಯಿ 2008–09ರ (ವಾರ್ಷಿಕ) ಅವಧಿಗೆ ಅಂದರೆ ದಿನಾಂಕ: 01.07.2008 ರಿಂದ 30.06.2009ರ ಅವಧಿಗೆ ಅಥವಾ ಟೆಂಡರ್ / ಹರಾಜು ಒಪ್ಪಿಕೊಂಡ ದಿನದಿಂದ 30ನೇ ಜೂನ್ 2009 ರವರೆಗೆ ಸಂಗ್ರಹಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಕಛೇರಿಯ ವಿವರವುಳ್ಳ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಟೆಂಡರ್ ಕಂ ಹರಾಜನ್ನು ದಿನಾಂಕ: 22.09.2008 ರಂದು ನಡೆಸಲಾಯಿತು ಸದರಿ ದಿನದಂದು ಕ್ರಮ ಸಂಖ್ಯೆ: III(7) ಹಾಗೂ V(1) ರಲ್ಲಿರುವ ಅರಣ್ಯ ಉತ್ಪನ್ನಗಳು ಹಾಗೂ ಮರು ಹರಾಜು ದಿನಾಂಕ: 30.09.2008 ರಂದು ಕ್ರಮ ಸಂಖ್ಯೆ III(5) ಮತ್ತು III(8) ರಲ್ಲಿರುವ ಹಾಗೂ V(2) ರಲ್ಲಿರುವ ಅರಣ್ಯ ಉತ್ಪನ್ನಗಳು ಹರಾಜಾಗಿರುತ್ತದೆ. ಉಳಿದ ಐಟಂಗಳು ತಗ್ಗುಬೆಲೆಗಿಂತ ಅತೀ ಕಡಿಮೆ ಮೊತ್ತವನ್ನು ಬಿಡ್ಡುದಾರರು ಬಿಡ್ಡು ಮಾಡಿರುವುದರಿಂದ ಉಳಿದ ಈ ಕೆಳಕಂಡಂತೆ ಅರಣ್ಯ ಉತ್ಪನ್ನಗಳನ್ನು ಮರು ಹರಾಜು ಮಾಡಲು ಕೆಳಗೆ ತಪ್ಸೀಲಿನಲ್ಲಿ ಸೂಚಿಸಿರುವ ಪ್ರಕಾರವಾಗಿ ಟೆಂಡರ್ ಕಂ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಇಷ್ಟವುಳ್ಳ ನೊಂದಾಯಿತ ಅರಣ್ಯ ಗುತ್ತಿಗೆದಾರರು ಭಾಗವಹಿಸಿ ಪಡೆಯಬಹುದು.

ಪ್ರಕಟಣೆಯಲ್ಲಿ ನಮೂದಿಸಿರುವ ಅರಣ್ಯೋತ್ಪನ್ನವು ನಿರ್ಧರಿತ ಬಂಜರು ಭೂಮಿ, ಗೋಮಾಳ, ಹರಾಜು ಗ್ರಾಮ ಠಾಣಾ ಮತ್ತು ಸಮುದಾಯ ಉದ್ದೇಶಕ್ಕಾಗಿ ಬಿಟ್ಟಿರುವ ಪ್ರದೇಶಗಳು ತಹಶೀಲ್ದಾರರಿಂದ ಪ್ರತ್ಯೇಕವಾಗಿ ಮಾರಾಟ ಮಾಡಿರುವ ಮತ್ತು ಮಾರಲ್ಪಡುವ ಪ್ರದೇಶಗಳು, ಮುನ್ಸಿಪಲ್, ನಗರಸಭೆ, ಜಿಲ್ಲಾಪಂಚಾಯತ್, ಮಂಡಲ ಪಂಚಾಯತ್, ಗ್ರಾಮಪಂಚಾಯತ್ ಹಾಗೂ ಈ ವಿಭಾಗದ ನಿಯಂತ್ರಣಕ್ಕೆ ಒಳಪಡದೆ ಇರುವ ಪ್ರದೇಶಗಳನ್ನು ಹೊರತುಪಡಿಸಿ ಈ ಟೆಂಡರ್ ಕಂ ಹರಾಜಿನಲ್ಲಿ ಕೈಬಿಟ್ಟಿರುತ್ತದೆ.

| ಕ್ರ. ಸಂ. | ಫಸಲಿನ ರೂಡಿಸುವ ಪ್ರದೇಶ | ಮಾರಾಟ ಮಾಡುವ ಸ್ಥಳ | ಟೆಂಡರ್ ಸ್ವೀಕರಿಸುವ ದಿನಾಂಕ / ವೇಳೆ | ಹರಾಜು ದಿನಾಂಕ ವೇಳೆ | ಟೆಂಡರ್ ಫಾರಂ ಲಗತ್ತಿಸಬೇಕಾದ ಠೇವಣಿ / ಹರಾಜಿನ ಹಣ |
|---|---|---|---|---|---|
| 1 | 2 | 3 | 4 | 5 | 6 |
| I). | **ಸಿಟ್ರಿಡೋರ ಎಲೆ ಫಸಲು** | | | | |
| 1 | ಮಾಗಡಿ ತಾಲ್ಲೂಕು | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ | ದಿನಾಂಕ:30.10.08 ಮಧ್ಯಾಹ್ನ 3.00 ರಿಂದ 3.30 ಗಂಟೆಯವರೆಗೆ ಟೆಂಡರ್ ಕಂ ಹರಾಜನ್ನು ನಡೆಸಲಾಗುವುದು. | ದಿನಾಂಕ:30.10.08 ಮಧ್ಯಾಹ್ನ 3.30 ಗಂಟೆಗೆ | ರೂ.5000/– ಮೊಬಲಗಿನ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್ |

| 1 | 2 | 3 | 4 | 5 | 6 |
|---|---|---|---|---|---|
| **II)** | **ತೂಪ್ರ ಎಲೆ (ಬೀಡಿ ಎಲೆ) ಫಸಲು** | | | | |
| 1 | ರಾಮನಗರ ತಾಲ್ಲೂಕು | –"– | –"– | –"– | –"– |
| 2 | ಚನ್ನಪಟ್ಟಣ ತಾಲ್ಲೂಕು | –"– | –"– | –"– | –"– |
| 3 | ಕನಕಪುರ ತಾಲ್ಲೂಕು | –"– | –"– | –"– | –"– |
| 4 | ಮಾಗಡಿ ತಾಲ್ಲೂಕು | –"– | –"– | –"– | –"– |
| 5 | ಸಾತನೂರು ವಲಯ | –"– | –"– | –"– | –"– |
| **III)** | **ಹುಣಸೆ ಫಸಲು** | | | | |
| 1. | ರಾಮನಗರ ತಾಲ್ಲೂಕು (ಕೂನಗಲ್ ಕಿರು ಅರಣ್ಯ ಹೊರತುಪಡಿಸಿದೆ) | –"– | –"– | –"– | –"– |
| 2. | ಚನ್ನಪಟ್ಟಣ ತಾಲ್ಲೂಕು | –"– | –"– | –"– | –"– |
| 3. | ಕನಕಪುರ ತಾಲ್ಲೂಕು, ಕನಕಪುರ ಭಾಗ–1, ತೋಕಸಂದ್ರ ಬೀಟ್, ಮರಳವಾಡಿ ಬೀಟ್, ತೇರುಬೀದಿ ಬೀಟ್, ಗೌಡಹಳ್ಳಿ ಬೀಟ್ (ರಾಮಸ್ವಾಮಿ ದೇವಸ್ಥಾನ ಪ್ರದೇಶ) | –"– | –"– | –"– | –"– |
| 4. | ಕನಕಪುರ ತಾಲ್ಲೂಕು, ಕನಕಪುರ ಭಾಗ–2, ರ ಕಾಡುಶಿವನಹಳ್ಳಿ ಬೀಟ್, ಹಂಚಿಗುಳಿ ಬೀಟ್, ಗೌಡಹಳ್ಳಿ ಭಾಗ (ಕಾಳೇಗೌಡನಹಳ್ಳಿ ಕೆರೆ ಪ್ರದೇಶ) | –"– | –"– | –"– | –"– |
| 5. | ಕನಕಪುರ ತಾಲ್ಲೂಕು, ಕನಕಪುರ ಭಾಗ–4, ಮಂಜುನಾಥ್ ಬೀಟ್, ರಾಮದೇವರ ಬೆಟ್ಟ ಬೀಟ್, ಗರಳಾಪುರ ಬೀಟ್, ನಾರಾಯಣಪುರ ಬೀಟ್ | –"– | –"– | –"– | –"– |
| **IV).** | **ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಬದಿಯಲ್ಲಿರುವ ಹುಣಸೆ ಫಸಲು** | | | | |
| 1. | ಮಾಗಡಿ ತಾಲ್ಲೂಕು (ರಾಷ್ಟ್ರೀಯ ಹೆದ್ದಾರಿ ಬಿಟ್ಟು ಮಾಗಡಿ ತಾಲ್ಲೂಕಿನ ಸರಹದ್ದಿನಲ್ಲಿ ಬರುವ ಎಲ್ಲಾ ಮುಖ್ಯ ರಸ್ತೆಗಳು) | –"– | –"– | –"– | –"– |
| 2. | ಚನ್ನಪಟ್ಟಣ ತಾಲ್ಲೂಕು (ಚನ್ನಪಟ್ಟಣ ತಾಲ್ಲೂಕಿನಲ್ಲಿ ಬರುವ ಬೆಂಗಳೂರು ಮೈಸೂರು ರಾಜ್ಯ ಹೆದ್ದಾರಿ ಮತ್ತು ಇದರ ಸರಹದ್ದಿನಲ್ಲಿ ಬರುವ ಮುಖ್ಯ ರಸ್ತೆಗಳು) | –"– | –"– | –"– | –"– |
| 3. | ಕನಕಪುರ ತಾಲ್ಲೂಕು, (ಕನಕಪುರ, ಬೆಂಗಳೂರು ರಾಜ್ಯ ಹೆದ್ದಾರಿ ಹಾಗೂ ಕನಕಪುರ ತಾಲ್ಲೂಕಿನ ಸರಹದ್ದಿನಲ್ಲಿ ಬರುವ ಎಲ್ಲಾ ಜಿಲ್ಲಾ ಮುಖ್ಯ ರಸ್ತೆಗಳು) | –"– | –"– | –"– | –"– |
| ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 209 ಕಿ.ಮೀ. 30 ರಿಂದ 86 ಕಿ.ಮೀ. ವರೆಗೆ ಮತ್ತು ಕನಕಪುರ ಸಾತನೂರು ಪಟ್ಟಣಗಳ ಮೇಲೆ ಹಾದು ಹೋಗುವ ಮಾರ್ಗದಲ್ಲಿರುವ ರಸ್ತೆ ಬದಿಯ ಹುಣಸೆ ಮರಗಳನ್ನು ಹೊರತುಪಡಿಸಿ) | | | | | |
| 4. | ರಾಮನಗರ ತಾಲ್ಲೂಕು (ರಾಮನಗರ ತಾಲ್ಲೂಕಿನಲ್ಲಿ ಬರುವ ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿ ಮತ್ತು ಇದರ ಸರಹದ್ದಿನಲ್ಲಿ ಬರುವ ಎಲ್ಲಾ ಮುಖ್ಯ ರಸ್ತೆಗಳು) | –"– | –"– | –"– | –"– |
| **V)** | **ಕಿರು ಅರಣ್ಯ ಉತ್ಪನ್ನ ಅಂದರೆ ಅರಳೆಕಾಯಿ, ಬೇಲದ ಹಣ್ಣು ನಲ್ಲಿಕಾಯಿ** | | | | |
| 1. | ರಾಮನಗರ ತಾಲ್ಲೂಕು (ಕೂನಗಲ್ ಕಿರು ಅರಣ್ಯ ಹೊರತುಪಡಿಸಿದೆ) | –"– | –"– | –"– | –"– |
| 2. | ಚನ್ನಪಟ್ಟಣ ತಾಲ್ಲೂಕು | –"– | –"– | –"– | –"– |
| 3. | ಸಾತನೂರು ವಲಯ (ಹುಲಿಯಾ ಕಾಲೋನಿಯ 125 ಎಕರೆ ಹಾಗೂ ಕಾವೇರಿ ವನ್ಯಪ್ರಾಣಿ ವಿಭಾಗ ಮತ್ತು ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನ ಪ್ರದೇಶಗಳು ಹಾಗೂ ನೆಹರುದೊಡ್ಡಿ, ಗಾಂಧಿ ಗ್ರಾಮದ ಅಚಲು ಅರಣ್ಯದಲ್ಲಿರುವ 125 ಹುಣಸೆ ಮರಗಳನ್ನು ಬಿಟ್ಟು) | –"– | –"– | –"– | –"– |

**ಷರತ್ತುಗಳು**

1) ರೂ. 200/– ಮತ್ತು ಇತರೆ ತೆರಿಗೆಗಳನ್ನು ಸಂದಾಯ ಮಾಡಿ ದಿನಾಂಕ: 30.10.2008 ಮಧ್ಯಾಹ್ನ 1.00 ಗಂಟೆಯವರೆಗೆ ರಾಮನಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಇವರಿಂದ ಟೆಂಡರ್ ಫಾರಂ ಪಡೆಯಬಹುದು. ಭರ್ತಿ ಮಾಡಿದ ಫಾರಂ ಮೇಲೆ ರೂ. 2.00 ಕೋರ್ಟ್ ಫೀ ಸ್ಟಾಂಪ್‌ನ್ನು ಅಂಟಿಸತಕ್ಕದ್ದು. ಹಾಗೆಯೇ ಟೆಂಡರ್ ಫಾರಂನ ಜೊತೆ 5000/– (ಐದು ಸಾವಿರ) ಮೊಬಲಗಿನ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ.ಯನ್ನು ಪ್ರತಿ ಟೆಂಡರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರ ಹೆಸರಿನಲ್ಲಿ ತೆಗೆದು ಇ.ಎಂ.ಡಿ.ಯಾಗಿ ಲಗತ್ತಿಸತಕ್ಕದ್ದು. ಹಾಗೆಯೇ ಈ ಹರಾಜಿನಲ್ಲಿ ಭಾಗವಹಿಸುವವರು ಸಹಾ ರೂ. 5000/– (ಐದು ಸಾವಿರ) ಗಳನ್ನು ನಗದು ರೂಪದಲ್ಲಿ ಇ.ಎಂ.ಡಿ. ಯನ್ನು ಹರಾಜಿಗೆ ಮುನ್ನ ಕೊಡತಕ್ಕದ್ದು.
2) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗದಲ್ಲಿ 2008–09ನೇ ಸಾಲಿಗೆ ನೋಂದಾಯಿಸಿದ ಹಾಗೂ ಅರ್ಹತೆ ಪಡೆದಿರುವ ಅರಣ್ಯ ಗುತ್ತಿಗೆದಾರರಿಗೆ ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿದೆ.

3) ಹಿಂದಿನ ಹರಾಜಿನಲ್ಲಿ ಪಡೆದ ಫಸಲಿನ ಬಾಬ್ತು ಯಾವುದೇ ಹಣ ಬಾಕಿಯಿರುವ ಗುತ್ತಿಗೆದಾರರು ಮೇಲಿನ ಟೆಂಡರ್ / ಹರಾಜಿನಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರುವುದಿಲ್ಲ.

4) ಬ್ಲಾಕ್ ಲೀಸ್ಟ್ ಆಗಿರುವವರು, ಇನ್‌ಸಾಲ್ವೆಂಟ್, ಡಿಫಾಲ್ಟರ್ಸ್ ಆದವರು ಮತ್ತು ಮೈನರ್ಸ್ ಟೆಂಡರ್ ಸಲ್ಲಿಸುವುದಕ್ಕಾಗಲೀ ಅಥವಾ ಭಾಗವಹಿಸುವುದಕ್ಕೆ ಅರ್ಹರಾಗಿರುವುದಿಲ್ಲ.

5) ಈ ಹರಾಜಿನ ಟೆಂಡರ್‌ಗಳನ್ನಾಗಲೀ, ಹರಾಜನ್ನಾಗಲೀ ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪಡೆದಿರುತ್ತಾರೆ.

6) ಒಪ್ಪಿಕೊಳ್ಳಲಾಗದ ಟೆಂಡರ್ ಹರಾಜಿನ 1/4 ಭಾಗ ಹಣವನ್ನು ಪೂರ್ಣವಾಗಿ ಚಾಲ್ತಿಯಲ್ಲಿರುವ ಎಲ್ಲಾ ತೆರಿಗೆಗಳೊಂದಿಗೆ ಸ್ಥಳದಲ್ಲಿ ಟೆಂಡರ್ – ಕಂ –ಹರಾಜು ದಿನದಂದೇ ಪಾವತಿ ಮಾಡಬೇಕು. ಇನ್ನು ಮಿಕ್ಕ 3/4 ಭಾಗ ಹಣವನ್ನು ಕರಾರು ಮಾಡಿಕೊಡುವ ದಿನ ಅಥವಾ ಮುಂಚಿತವಾಗಿ ಪಾವತಿಸಬೇಕು. ಇಲ್ಲದಿದ್ದಲ್ಲಿ ಅವರ ಇ.ಎಂ.ಡಿ. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆಯಲ್ಲದೇ ಯೂನಿಟ್‌ನ್ನು ಅವರ ಜವಾಬ್ದಾರಿಯಲ್ಲಿ ಹರಾಜು ಮಾಡಲಾಗುವುದು. ಒಂದು ವೇಳೆ ಮರು ಹರಾಜಿನಲ್ಲಿ ಕಡಿಮೆ ಬಿಡ್ ಬಂದು ಸರ್ಕಾರಕ್ಕೆ ನಷ್ಟವಾದಲ್ಲಿ ಸೆಕ್ಷನ್ 109 ರ ಕರ್ನಾಟಕ ಅರಣ್ಯ ಕಾಯ್ದೆಯಂತೆ ಬಾಕಿ ಭೂಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವುದು ಹಾಗೂ ಸಾಮಾಗ್ರಿಗಳ ಮಾರಾಟ ಶಾಸನ ಕಾಯ್ದೆ ಸೆಕ್ಷನ್ 54(4) ರ ಪ್ರಕಾರ ಅಥವಾ ನಾಗರೀಕ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

7) ಕರ್ನಾಟಕ ರಾಜ್ಯದಲ್ಲಿಯ ಸವಾಲುದಾರರನ್ನು ಹೊರತುಪಡಿಸಿ, ಅಥವಾ ಯಾವುದೇ ತರಹದ ಆಸ್ತಿಯು ಕರ್ನಾಟಕ ರಾಜ್ಯದಲ್ಲಿ ಇಲ್ಲದಂಥ ಸವಾಲುದಾರರು ಸವಾಲಿನಲ್ಲಿ ಭಾಗವಹಿಸುವುದಕ್ಕಿಂತ ಮುಂಚಿತವಾಗಿ ಸವಾಲು ಮಾಡುವ ಅಧಿಕಾರಿಗೆ ತಮ್ಮ ಸವಾಲಿನ ಅರ್ಧ ರಕಂನ್ನು ಜಾರಿಯಲ್ಲಿರುವ ಮಾರಾಟ ಕರ ಮತ್ತು ಅರಣ್ಯಾಭಿವೃದ್ಧಿ ಕರ ಕೊಡಬೇಕು. ಸದರಿ ರಕಂ ಮುಂದಿನ 100/– ರೂಗೆ ಸರಿ ಇರಬೇಕು. ಮೇಲೆ ವಿವರಿಸಿದಂತೆ ಯಶಸ್ವಿ ಸವಾಲುದಾರನು ಶೇ. 50 ಸವಾಲಿನ ರಕಂ ಕಟ್ಟಿದಲ್ಲಿ ಉಳಿದ ಶೇ. 50 ರಕಂ ಚಾಲ್ತಿಯಲ್ಲಿರುವ ಎಲ್ಲಾ ಕರಗಳನ್ನು ಪಾವತಿ ಮಾಡತಕ್ಕದ್ದು ಶೇ 50 ಉಳಿದ ಹಣವನ್ನು ಕರಾರುನಾಮೆ ಸಹಿ ಮಾಡುವುದಕ್ಕಿಂತ ಪೂರ್ವದಲ್ಲಿ ಪಾವತಿ ಮಾಡಬೇಕಾಗುವುದು.

8) ಟೆಂಡರ್‌ದಾರರು ಟೆಂಡರ್ ಫಾರಂನಲ್ಲಿ ಅಥವಾ ಹರಾಜನ್ನು ನಡೆಸುವ ಅಧಿಕಾರಿಯ ಬಳಿ ನೀಡುವ ವಿಳಾಸವೇ ಅಂತಿಮ ಈ ವಿಳಾಸಕ್ಕೆ ಅಂಚೆ ದೃಢೀಕರಣ ಪತ್ರ ಪಡೆದು ಕಳಿಸಿದ ಪತ್ರವು ಟೆಂಡರ್‌ದಾರರಿಗೆ ತಲುಪಿದೆ ಎಂದೇ ತಿಳಿಯಲಾಗುವುದು.

9) ಕಿರು ಅರಣ್ಯ ಉತ್ಪನ್ನದ ಯಾವುದೇ ಬಾಬ್ತನ್ನು ಹರಾಜು ಮಾಡದೇ ಹಿಂಪಡೆಯಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಂಪೂರ್ಣ ಹಕ್ಕು ಇರುತ್ತದೆ. ಈ ಸಂಬಂಧ ಟೆಂಡರುದಾರರಾಗಲಿ ಅಥವಾ ಹರಾಜಿನಲ್ಲಿ ಭಾಗವಹಿಸಿದವರಾಗಲೀ ಯಾವುದೇ ಪರಿಹಾರ ಧನವನ್ನು ಹಾಗೆ ಹಿಂಪಡೆದ ಹರಾಜಿನ ಬಾಬ್ತು ಕ್ಲೈಮ್ ಮಾಡುವ ಹಕ್ಕು ಇರುವುದಿಲ್ಲ.

10) ಟೆಂಡರುದಾರರು, ಟೆಂಡರನ್ನು ಸೀಲು ಮಾಡಿದ ಲಕೋಟೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರಿಗೆ ವಿಳಾಸಿಸಿ ಟೆಂಡರು ಪೆಟ್ಟಿಗೆಗೆ ಹಾಕಬೇಕು. ಎಲ್ಲಾ ಟೆಂಡರುಗಳನ್ನು ಗೋಪ್ಯವಾಗಿ ಇಡಲಾಗುವುದು.

11) ಟೆಂಡರ್ ಲಕೋಟೆ ಮೇಲೆ.................................................... ಇಂತಹ ಬಾಬ್ತುಗಾಗಿ ಟೆಂಡರು ಎಂದು ನಮೂದಿಸಬೇಕು. ಸಾಮಾನ್ಯವಾಗಿ ಒಬ್ಬ ಹೆಚ್ಚು ಟೆಂಡರುಗಳನ್ನು ಹಾಕಿದ್ದಲ್ಲಿ ಹೆಚ್ಚು ದರ ನಮೂದಿಸಿರುವ ಟೆಂಡರನ್ನು ಮಾತ್ರ ಪುರಸ್ಕರಿಸಿ ಉಳಿದ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

12) ಟೆಂಡರುಗಳನ್ನು ಟೆಂಡರಿಗಾಗಿಯೇ ಪ್ರತ್ಯೇಕವಾಗಿ ಇಟ್ಟಿರುವ ಪೆಟ್ಟಿಗೆಯಲ್ಲಿ ಹಾಕಬೇಕು. ಟೆಂಡರಿನಲ್ಲಿ ಷರತ್ತುಗಳನ್ನು ನಮೂದಿಸಿ ಹಾಕಬಾರದು ಒಂದು ವೇಳೆ ಷರತ್ತು ನಮೂದಿಸಿ ಟೆಂಡರು ಹಾಕಿದ್ದರೆ ಅಂತಹ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

13) ಪ್ರತಿಯೊಂದು ಟೆಂಡರಿನ ಜೊತೆಯಲ್ಲಿ ಆದಾಯ ತೆರಿಗೆ ಪಾವತಿ ದೃಢೀಕರಣ ಪತ್ರ ಲಗತ್ತಿಸಬೇಕು.

14) ಮುಂಗಡ ಠೇವಣಿಯನ್ನು ಲಗತ್ತಿಸದೇ ಹಾಕಿರುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

15) ಟೆಂಡರುದಾರರು ಹರಾಜಿನಲ್ಲೂ ಭಾಗವಹಿಸಲು ಅರ್ಹರಿರುತ್ತಾರೆ. ಠೇವಣಿಯನ್ನು ಕಟ್ಟದೆ ಹರಾಜಿನಲ್ಲಿ ಭಾಗವಹಿಸುವಂತಿಲ್ಲ.

16) ಪ್ರತಿ ಯೂನಿಟ್‌ಗೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ಹೆಸರನ್ನು ದಾಖಲಿಸಿ ಅವರ ಸಹಿಯನ್ನು ಬಿಡ್ಡರ್ಸ್ ಪಟ್ಟಿಯಲ್ಲಿ ತೆಗೆದುಕೊಳ್ಳಲಾಗುವುದು. ಅನಂತರ ಯಾವುದೇ ಬಿಡ್ಡನ್ನು ಅಂಗೀಕರಿಸುವುದಿಲ್ಲ.

17) ಒಂದು ವೇಳೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ದರವನ್ನು ಹರಾಜು ನಡೆಸುವ ಅಧಿಕಾರಿ ತಿರಸ್ಕರಿಸಿದಲ್ಲಿ ನಂತರ ಅತಿ ಹೆಚ್ಚು ಬಿಡ್ಡು ಮಾಡಿರುವವರ ಬಿಡ್ಡನ್ನು ಅಧಿಕಾರಿಯು ಒಪ್ಪಬಹುದು ಅಥವಾ ಮರು ಹರಾಜು ಮಾಡಬಹುದು.

18) ಬಿಡ್ಡುದಾರರು ಬಿಡ್ಡನ್ನು ಒಪ್ಪಿದಲ್ಲಿ ಬಿಡ್ಡುದಾರರು ಇ.ಎಂ.ಡಿ. ಜೊತೆಗೆ ಪುನಃ ಹರಾಜಿನ ಮೊತ್ತದ ಶೇ. 2ರ ಭಾಗವನ್ನು ಠೇವಣಿಯಾಗಿ ಇಡಬೇಕು.

19) ವಿಫಲ ಟೆಂಡರುದಾರರ ಠೇವಣಿ ಹಣವನ್ನು ಹರಾಜು ಮುಗಿದ ತಕ್ಷಣ ಹಿಂತಿರುಗಿಸಲಾಗುವುದು.

20) ಒಂದು ವೇಳೆ ಬಿಡ್‌ದಾರರು ನಮೂದಿಸಿರುವ ಹಣವನ್ನು ಮೇಲಾಧಿಕಾರಿಗಳು ತಿರಸ್ಕರಿಸಿದಲ್ಲಿ ಅವರು ಕಟ್ಟಿರುವ ಹಣವನ್ನು ತಕ್ಷಣವೇ ಹಿಂತಿರುಗಿಸಲಾಗುವುದು.

21) ಯಶಸ್ವಿ ಟೆಂಡರುದಾರರಿಗೆ ಅವರ ಟೆಂಡರು ಒಪ್ಪಿಗೆಯಾಗಿರುವ ಬಗ್ಗೆ ನೋಂದಾಯಿತ ಅಂಚೆಯ ಮೂಲಕ ಮಾಹಿತಿ ನೀಡಲಾಗುವುದು ಹಾಗೂ ಕಛೇರಿ ಸೂಚನಾ ಫಲಕದಲ್ಲೂ ಅವರ ಹೆಸರನ್ನು ನಮೂದಿಸಲಾಗುವುದು. ಈ ರೀತಿ ಮಾಡಿದ ನಂತರ ಟೆಂಡರ್‌ದಾರರಿಗೆ ಅದರ ಒಪ್ಪಿಗೆಯ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ಭಾವಿಸಲಾಗುವುದು.

22) ಟೆಂಡರು ಸ್ವೀಕೃತವಾದ ಮಾಹಿತಿ ತಲುಪಿದ 15 ದಿನಗಳಲ್ಲಿ ಟೆಂಡರುದಾರರು ಸಂಬಂಧಿಸಿದ ಘಟಕಗಳ ಅಧಿಕಾರಿಯವರ ಜೊತೆ ಪ್ರತ್ಯೇಕವಾಗಿ ಒಪ್ಪಂದ ಮಾಡಿಕೊಳ್ಳಬೇಕು.

23) ಉಳಿಕೆ ಹಣವನ್ನು ಕಟ್ಟುವಲ್ಲಿ ಟೆಂಡರುದಾರರು ಯಶಸ್ವಿಯಾಗದಿದ್ದಲ್ಲಿ ಅವರ ಟೆಂಡರ್‌ನ್ನು ಕೂಡಲೇ ಸ್ಥಗಿತಗೊಳಿಸಲಾಗುವುದು ಒಂದು ವೇಳೆ ಮಾರಾಟ ಬೆಲೆ ಕಂತುಗಳು ಮತ್ತು ಬಡ್ಡಿಯ ಕಂತುಗಳನ್ನು ಒಂದು ತಿಂಗಳಿಗೂ ಹೆಚ್ಚು ಅವಧಿಗೆ ಕಟ್ಟದಿದ್ದರೆ ಅಂತಹ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

24) ಟೆಂಡರುದಾರರು ವಿಭಾಗೀಯ ಅಧಿಕಾರಿಗಳಿಗೆ ಆಗಿಂದಾಗ್ಗೆ ಅವರು ನೇಮಿಸಿಕೊಂಡಿರುವ ಕೆಲಸಗಾರರ ಹೆಸರು ಮತ್ತು ವಿಳಾಸವನ್ನು ವಿಭಾಗೀಯ ಅಧಿಕಾರಿಗಳಿಗೆ ಸಲ್ಲಿಸುವುದು.

25) ಬೆಳೆಯ ಸಂಗ್ರಹಣೆ ಕೆಲಸವನ್ನು ಮಾಡುವ ಪ್ರತಿಯೊಂದು ನೌಕರರ ಹೆಸರನ್ನು ಗುತ್ತಿಗೆದಾರರು ಅಥವಾ ಅವರಿಂದ ನೇಮಿಸಲ್ಪಟ್ಟ ಪ್ರತಿನಿಧಿಗಳಿಂದ ಲಿಖಿತ ಅನುಮತಿಯನ್ನು ತರಬೇಕು.

26) ಅರಣ್ಯ ಇಲಾಖೆಯ ನೌಕರರನ್ನು ವಲಯ ಅರಣ್ಯಾಧಿಕಾರಿಗಳ ಅನುಮತಿಯೊಂದಿಗೆ ಮಾತ್ರ ಕೆಲಸಕ್ಕೆ ತೆಗೆದುಕೊಳ್ಳುವುದು.

27) ಬೆಳೆಯನ್ನು ತೆಗೆಯುವ ಕಾಲದಲ್ಲಿ ಗುತ್ತಿಗೆದಾರರು / ನೌಕರರು ಅವರ ನಡುವಳಿಕೆಗೆ ಮತ್ತು ಕೆಲಸದಲ್ಲಿ ನಿರತವಾದ ಎಲ್ಲಾ ನೌಕರರ ನಡವಳಿಕೆಗೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.

28) ಪ್ರತಿಯೊಬ್ಬ ಖರೀದಿದಾರರು ಪ್ರತಿ ಮಾಹೆಯಲ್ಲಿ ಅವರು ತೆಗೆದ ಉತ್ಪನ್ನದ ಪ್ರಮಾಣದ ಬಗ್ಗೆ ಲೆಕ್ಕ ನೀಡಬೇಕು.

29) ಟೆಂಡರುದಾರರು ಅವರು ಪಡೆದ ಗುತ್ತಿಗೆಯನ್ನು ಯಾರಿಗೂ ಹಸ್ತಾಂತರಿಸುವ ಹಾಗಿಲ್ಲ.

30) ಗುತ್ತಿಗೆದಾರರು ಕೆಲಸಕ್ಕೆ ನೇಮಿಸಿಕೊಂಡ ನೌಕರರಿಗೆ ಏನಾದರೂ ಹಾನಿಯಾದಲ್ಲಿ ಅದನ್ನು ಗುತ್ತಿಗೆದಾರರೇ ಭರಿಸತಕ್ಕದ್ದು.

31) ಗುತ್ತಿಗೆಯ ಅವಧಿಯನ್ನು ಒಂದು ನಿಶ್ಚಿತ ಅವಧಿಗೆ ಮಾಡಿದ್ದು ಯಾವುದೇ ಕಾರಣಕ್ಕೂ ಈ ಅವಧಿಯನ್ನು ವಿಸ್ತರಿಸಲಾಗುವುದಿಲ್ಲ. ಗುತ್ತಿಗೆಯ ಅವಧಿಯು ಮುಗಿಯುವುದರೊಳಗೆ ಗುತ್ತಿಗೆದಾರರು ಉತ್ಪನ್ನಗಳನ್ನು ತೆಗೆಯತಕ್ಕದ್ದು.

32) ಗುತ್ತಿಗೆದಾರರು ಎಲ್ಲಾ ಸಮಯದಲ್ಲೂ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಇತರೆ ಶಾಸನಬದ್ಧ ಮಾರ್ಪಾಟುಗಳಿಗೆ ಬದ್ಧರಾಗಿರುತ್ತಾರೆ.

33) ಗುತ್ತಿಗೆದಾರರು ಟೆಂಡರು ಷರತ್ತಿನ ಯಾವುದೇ ಅಂಶಗಳನ್ನು ಉಲ್ಲಂಘನೆ ಮಾಡಿದಲ್ಲಿ ಅವರ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

34) ಮೇಲ್ಕಂಡ ಟೆಂಡರ್ ಹರಾಜಿನಲ್ಲಿ ಭಾಗವಹಿಸುವ ಮುನ್ನ ಅರಣ್ಯ ಗುತ್ತಿಗೆದಾರರು ಆಯಾಯ ತಾಲ್ಲೂಕಿನ ವಲಯ ಅರಣ್ಯಾಧಿಕಾರಿಯವರನ್ನು ಸಂಪರ್ಕಿಸಿ ಫಸಲನ್ನು ನೋಡಲು ಅನುಮತಿ ಪಡೆದು ಫಸಲನ್ನು ಪರಿಶೀಲಿಸಿಕೊಳ್ಳಬೇಕು.

35) ಈ ಟೆಂಡರ್–ಕಂ–ಹರಾಜಿಗೆ ಸಂಬಂಧಿಸಿದಂತೆ ಬೇಕಾದ ಇತರೆ ಮಾಹಿತಿಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ತಿಳಿದುಕೊಳ್ಳಬಹುದು.

36) ಟೆಂಡರ್–ಕಂ–ಹರಾಜಿನಲ್ಲಿ ಯಶಸ್ವಿಯಾದ ಟೆಂಡರ್ / ಹರಾಜಿಗೆ ಅರಣ್ಯ ಗುತ್ತಿಗೆದಾರರಿಗೆ ಸದರಿ ಪ್ರದೇಶದ ಬೆಳೆಯನ್ನು ತೆಗೆಯಲು ಟೆಂಡರ್ ಹರಾಜು ಸಂಬಂಧಿಸಿದ ಅಧಿಕಾರಿಗಳಿಂದ ದೃಢೀಕೃತವಾದ ನಂತರ ಹಾಗೂ ಸದರಿ ಗುತ್ತಿಗೆದಾರರು ನಿಗಧಿತ ಛಾಪಾ ಕಾಗದದ ಮೇಲೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರೊಂದಿಗೆ ಕರಾರು ಮಾಡಿಕೊಂಡ ಮೇಲೆ ಅನುಮತಿ ನೀಡಲಾಗುವುದು.

37) ಪ್ರತಿ ತಾಲ್ಲೂಕಿಗೆ ಬೇರೆ ಬೇರೆ ಟೆಂಡರ್ ಫಾರಂನ್ನು ನಿಗಧಿತ ಇ.ಎಂ.ಡಿ. ಲಗತ್ತಿಸಿ ಉಪಯೋಗಿಸಬೇಕು.

**ಎಸ್. ಶಾಂತಪ್ಪ**

ಪಿ.ಆರ್. 516

ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

## ಅರಣ್ಯ ಇಲಾಖೆ

## ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ ಮಾನ್‌ಸೂನ್ ಕಾಮಗಾರಿ ಕೈಗೊಳ್ಳುವುದರ ಬಗ್ಗೆ ಟೆಂಡರ್

**ಎ2.ಬಿಯುಡಿ–ಉಅಸಂ, ಅಕಾಟೆ–ಸಿಆರ್.17/ 2008–09. ದಿನಾಂಕ: 30ನೇ ಸೆಪ್ಟೆಂಬರ್ 2008**

### ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2008–09 ನೇ ಸಾಲಿಗೆ 2008 ರ ಮಳೆಗಾಲದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಈ ಕೆಳಗೆ ನಮೂದಿಸಿರುವ ಕಾಮಗಾರಿ ಕೈಗೊಳ್ಳಲು ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ದಿನಾಂಕ 30-10-2008 ಅಪರಾಹ್ನ 3.00 ಗಂಟೆಯೊಳಗೆ ಮೊಹರು ಮಾಡಿದ ಟೆಂಡರ್ ಸಲ್ಲಿಸುವುದು ಅದೇ ದಿನ ಕೆಳಗೆ ಸಹಿ ಮಾಡಿದವರ ಅಥವಾ ಇವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟವರು ಸದರಿ ದಿನಾಂಕದಂದು ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಲಕೋಟೆಯನ್ನು ಅಪರಾಹ್ನ 4.00 ಗಂಟೆಗೆ ತೆಗೆಯಲಾಗುವುದು ಮತ್ತು ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೆ ಇದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ದಿನಾಂಕ 06-11-2008 ರಂದು ಅಪರಾಹ್ನ 3.00 ಗಂಟೆಗೆ ಎರಡನೇ ಬಾರಿಗೆ ನೋಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು ಮತ್ತು ಟೆಂಡರ್ ಲಕೋಟೆಯನ್ನು ಅದೇ ದಿನ 4.00 ಗಂಟೆಗೆ ತೆರೆಯಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

**1.ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ ಯೋಜನೆ (2008–09 ನೇ ಸಾಲಿಗೆ) ಯಡಿಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ವಿವರ.**

| ಕ್ರ. ಸಂ. | ವಲಯದ ಹೆಸರು | ಸ್ಥಳದ ಹೆಸರು | ಕಾಮಗಾರಿಯ ವಿವರ | ಯೋಜನೆ ಮತ್ತು ಮಾದರಿ | ಭೌತಿಕ (ಹೆ.ಗಳಲ್ಲಿ) | ಟೆಂಡರ್ ಅಂದಾಜು ಮೊತ್ತ (ರೂ. ಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಕಾಮಗಾರಿ ಪೂರೈಸಬೇಕಾದ ದಿನಾಂಕ |
|---|---|---|---|---|---|---|---|---|
| 1 | ಕನಕಪುರ | ಗಂಗಾಧರಗುಡ್ಡೆ ಎಸ್.ಎಫ್ | ಮಾನ್‌ಸೂನ್ ಕಾಮಗಾರಿ ಕೈಗೊಳ್ಳುವುದು | 1 | 50 | 3,49,500–00 | 34,950–00 | 31–03–2009 |
| 2 | ಕನಕಪುರ | ಗಂಗಾದರಗುಡ್ಡೆ ಎಸ್.ಎಫ್ | ಮಣ್ಣು ಸಂರಕ್ಷಣಾ ಕಾಮಗಾರಿ | 1 | 50 | 77,500–00 | 7,750–00 | 31–03–2009 |

**2. ಡಿ.ಡಿ.ಎಫ್ ಯೋಜನೆಯಡಿಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ವಿವರ.**

| ಕ್ರ. ಸಂ. | ವಲಯದ ಹೆಸರು | ಸ್ಥಳದ ಹೆಸರು | ಕಾಮಗಾರಿಯ ವಿವರ | ಭೌತಿಕ (ಹೆ.ಗಳಲ್ಲಿ) | ಟೆಂಡರ್ ಅಂದಾಜು ಮೊತ್ತ (ರೂ. ಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಕಾಮಗಾರಿ ಪೂರೈಸಬೇಕಾದ ದಿನಾಂಕ |
|---|---|---|---|---|---|---|---|
| 1 | ಚನ್ನಪಟ್ಟಣ | ಮಾಕಳಿ ಎಸ್.ಎಫ್ | ಮಾನ್‌ಸೂನ್ ಕಾಮಗಾರಿ ಕೈಗೊಳ್ಳುವುದು | 31 | 5,23,435–00 | 52,343–00 | 31–03–2009 |

**3. ಆರ್.ಓ.ಇ (ಅರಣ್ಯ ಅತಿಕ್ರಮಣ ತೆರವುಗೊಳಿಸಿರುವ ಜಾಗದಲ್ಲಿ ನೆಡುತೋಪು ಬೆಳೆಸುವುದು) ಯೋಜನೆಯಡಿಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ವಿವರ.**

| ಕ್ರ. ಸಂ. | ವಲಯದ ಹೆಸರು | ಸ್ಥಳದ ಹೆಸರು | ಕಾಮಗಾರಿಯ ವಿವರ | ಭೌತಿಕ (ಹೆ.ಗಳಲ್ಲಿ) | ಟೆಂಡರ್ ಅಂದಾಜು ಮೊತ್ತ (ರೂ. ಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಕಾಮಗಾರಿ ಪೂರೈಸಬೇಕಾದ ದಿನಾಂಕ |
|---|---|---|---|---|---|---|---|
| 1 | ಮಾಗಡಿ | **ಚಕ್ರಬಾವಿ ಎಂ.ಎಫ್** ಚಕ್ರಬಾವಿ ಮತ್ತು ಕೋರಮಂಗಲ ಪ್ರದೇಶ | ಮಾನ್‌ಸೂನ್ ಕಾಮಗಾರಿ ಕೈಗೊಳ್ಳುವುದು | 40 | 12,10,400 –00 | 1,21,040 –00 | 31–03–2009 |
| 2 | ಮಾಗಡಿ | **ಚಕ್ರಬಾವಿ ಎಂ.ಎಫ್** ಮತ್ತಿಕೆರೆ ಮತ್ತು ಮರಳದೇವನಪುರ ಪ್ರದೇಶ | ಮಾನ್‌ಸೂನ್ ಕಾಮಗಾರಿ ಕೈಗೊಳ್ಳುವುದು | 40 | 12,10,400 –00 | 1,21,040 –00 | 31–03–2009 |

**ನಿಬಂಧನೆಗಳು**

1. ಟೆಂಡರ್ ಫಾರಂಗಳನ್ನು ಫಾರಂಗೆ ರೂ. 200–00 ಹಾಗೂ ತೆರಿಗೆ ಪಾವತಿ ಮಾಡಿ ದಿನಾಂಕ 30-10-2008 ಕಛೇರಿ ಕೆಲಸದ ವೇಳೆಯಲ್ಲಿ ಅಪರಾಹ್ನ 1.00 ಗಂಟೆಯವರೆಗೆ ಪಡೆಯಬಹುದು ಮತ್ತು ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಈ ವಿಭಾಗದಲ್ಲಿ 2008–09ನೇ ಸಾಲಿಗೆ ತಮ್ಮ ಹೆಸರನ್ನು ಅರಣ್ಯ ಗುತ್ತಿಗೆದಾರರಾಗಿ ನೋಂದಾಯಿಸಿಕೊಳ್ಳಬೇಕು. ತಪ್ಪಿದ್ದಲ್ಲಿ ಅಂತವರ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.
2. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಪ್ರತಿ ಬ್ಲಾಕ್‌ಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಮೊಹರು ಲಕೋಟೆಯಲ್ಲಿ ಪ್ರತ್ಯೇಕವಾಗಿ ಇಎಂಡಿಯೊಂದಿಗೆ ಸಲ್ಲಿಸುವುದು.
3. ಭರ್ತಿ ಮಾಡಿದ ಟೆಂಡರ್ ಫಾರಂ ಅನ್ನು 30-10-2008 ರಂದು ಅಪರಾಹ್ನ 3.00 ಗಂಟೆಯವರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಸ್ವೀಕರಿಸುವರು ಮತ್ತು ಮೇಲ್ಕಂಡ ದಿನಾಂಕದಂದು ಯಾವುದೇ ಕಾರಣದಿಂದಾಗಿ ಟೆಂಡರ್ ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನ: ದಿನಾಂಕ 06-11-2008 ರಂದು ಅಪರಾಹ್ನ 4.00 ಗಂಟೆಗೆ ಟೆಂಡರನ್ನು ತೆರೆಯಲಾಗುವುದು ಈ ಬಗ್ಗೆ ಮತ್ತೆ ಪ್ರತ್ಯೇಕವಾದ ಪ್ರಕಟಣೆ ಹೊರಡಿಸುವುದಿಲ್ಲ.
4. ಈ ಸದರಿ ಕಾಮಗಾರಿಗಳು ಕಾಲಬದ್ದ ಕೆಲಸಗಳಾಗಿದ್ದು, ಒಂದು ಪಕ್ಷ ಯಾವುದಾದರೂ ಕಾಮಗಾರಿಯನ್ನು ಟೆಂಡರ್ ಮುಂಚೆ ಕೈಗೊಂಡಿದ್ದ ಪಕ್ಷದಲ್ಲಿ ಮತ್ತು ಕೆಲವು ಕೆಲಸಗಳನ್ನು ಕೈಬಿಡಬೇಕಾದ ಸಂದರ್ಭದಲ್ಲಿ ಅಂತಹ ಕೆಲಸಗಳನ್ನು ಈ ಪ್ರಕಟಣೆಯ ಟೆಂಡರಿನಿಂದ ಹೊರತುಪಡಿಸಿ ಉಳಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್‌ದಾರರಿಗೆ ಕಾಮಗಾರಿ ಕೈಗೊಳ್ಳಲು ಆದೇಶ ನೀಡಲಾಗುವುದು.
5. ಪ್ರತಿ ಟೆಂಡರ್ ದಾರರು ಈ ಕಾಮಗಾರಿಗಳನ್ನು ನೆರವೇರಿಸಲು ಅಗತ್ಯವಿರುವ ಸಲಕರಣೆಗಳನ್ನು ಹಾಗೂ ಸಾಗಾಣಿಕೆ ವ್ಯವಸ್ಥೆಯನ್ನು ಅವರೇ ಸ್ವಂತವಾಗಿ ಮಾಡಿಕೊಳ್ಳಬೇಕು.
6. ಈ ಮೇಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಆಯಾ ಕೆಲಸಕ್ಕೆ ನಿಗಧಿಪಡಿಸಿರುವ ಇಎಂಡಿ ಹಾಗೂ ಭದ್ರತಾ ಠೇವಣಿ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ ಇವರ ಪರವಾಗಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿಡಿ ರೂಪದಲ್ಲಿ ಟೆಂಡರ್ ಜೊತೆಗೆ ಸಲ್ಲಿಸಬೇಕಾಗುತ್ತದೆ.
7. ಗುತ್ತಿಗೆದಾರರು ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ಸಲ್ಲಿಸಿದಲ್ಲಿ ಅಂತಹವನ್ನು ತಿರಸ್ಕರಿಸಲಾಗುವುದು. ಇದರ ಬಗ್ಗೆ ಏನಾದರೂ ತಕರಾರುಗಳು ಉದ್ಭವವಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ವಿಭಾಗ, ರಾಮನಗರರವರ ತೀರ್ಮಾನವೇ ಅಂತಿಮವಾಗಿರುತ್ತದೆ.
8. ನಿಗದಿಪಡಿಸಿದ ಅವಧಿಯ ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

9. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಒಪ್ಪುವ ಹಾಗೂ ತಿರಸ್ಕರಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ ರವರು ಕಾಯ್ದಿರಿಸಿಕೊಂಡಿರುತ್ತಾರೆ.

10. ಟೆಂಡರ್‌ನಲ್ಲಿ ಯಶಸ್ವಿಯಾದ ಅರಣ್ಯ ಗುತ್ತಿಗೆದಾರರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ ಇವರಿಂದ ತಿಳುವಳಿಕೆ ನೀಡಿದ 7 ದಿವಸಗಳ ಒಳಗಾಗಿ ನಿರ್ದಿಷ್ಟ ನಮೂನೆಯಲ್ಲಿ ಕರಾರು ನಾಮೆಯನ್ನು ಸಹಿ ಮಾಡತಕ್ಕದ್ದು, ಈ ಅವಧಿಯನ್ನು ವಿಸ್ತರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ ಇವರು ಹೊಂದಿರುತ್ತಾರೆ.

11. ಈ ಮೇಲಿನ ಕಾಮಗಾರಿಗಳ ಅನುಷ್ಠಾನ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ವಾರ್ಷಿಕ ಕ್ರಿಯಾಯೋಜನೆಯ ಅನುಮೋದನೆ ನಿಬಂಧನೆಗೆ ಒಳಪಟ್ಟಿರುತ್ತದೆ. ಒಂದು ಪಕ್ಷ ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ಹಣ ಪಾವತಿಗಾಗಿ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.

12. ಎಲ್ಲಾ ಕೆಲಸಗಳು ಆಗಿಂದಾಗ್ಗೆ ಮುಕ್ತಾಯವಾದ ನಂತರ ಸದರಿ ಕೆಲಸಗಳನ್ನು ನಿಯಮದಂತೆ ಸಂಬಂಧಿಸಿದ ಅಧಿಕಾರಿಗಳಿಂದ ತನಿಖೆ ಮಾಡಿಸಿ ವಲಯ ಅರಣ್ಯಾಧಿಕಾರಿಗಳ ಮುಖಾಂತರ ಬಿಲ್ಲುಗಳನ್ನು ಅಳತೆ ಪುಸ್ತಕದೊಂದಿಗೆ (ಎಂಬಿ/ಎಫ್.ಎನ್.ಬಿ) ಒಪ್ಪಿಸಬೇಕಾಗುತ್ತದೆ ಮತ್ತು ಬಿಲ್ ಸಂದಾಯ ಮಾಡುವಾಗ ಸದರಿ ಬಿಲ್‌ಗಳಲ್ಲಿ ನಿಯಮದಂತೆ ಚಾಲ್ತಿಯಲ್ಲಿರುವ ಆದಾಯ ತೆರಿಗೆ, ಮಾರಾಟ ತೆರಿಗೆ, ಸರ್‌ಚಾರ್ಜ್ ಮತ್ತು ಭದ್ರತಾ ಠೇವಣಿ ಹಣವನ್ನು ಕಡಿತಗೊಳಿಸಲಾಗುವುದು ಮತ್ತು ಆಗಿಂದಾಗ್ಗೆ ಬದಲಾಗುವ ತೆರಿಗೆಗಳ ವ್ಯತ್ಯಾಸವನ್ನು ಸಹ ನಿಯಮದಂತೆ ಕಡಿತಗೊಳಿಸಲಾಗುವುದು.

13. ಕೆಲಸಗಳನ್ನು ನಿರ್ವಹಿಸುವಾಗ ಇತರೆ ನೆಡುತೋಪುಗಳನ್ನು ಹಾಳು ಮಾಡಿದಲ್ಲಿ ಗಿಡ ಮರಗಳನ್ನು ಕಡಿದು ನಾಶಪಡಿಸಿದಲ್ಲಿ ಸರ್ಕಾರಕ್ಕೆ ಆದ ನಷ್ಟದ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಕಾನೂನಿನ ಕ್ರಮ ಜರುಗಿಸಲಾಗುವುದು.

14. ಕೆಲಸಗಳ ವಿವರಗಳು ಮತ್ತು ಹೆಚ್ಚಿನ ನಿಬಂಧನೆಗಳನ್ನು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

15. ಯಾವುದೇ ವಿಭಾಗದಲ್ಲಿ ಗುತ್ತಿಗೆದಾರರು ಡಿಫಾಲ್ಟ್‌ರ್ ಆಗಿದ್ದರೆ ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.

16. ಗುತ್ತಿಗೆದಾರರು ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ ಮತ್ತಿತರ ಅನುಕೂಲಗಳನ್ನು ಸ್ವತ: ಗುತ್ತಿಗೆದಾರರೇ ವಹಿಸಬೇಕು. ಇಲಾಖೆಯು ಗುತ್ತಿಗೆದಾರರ ಮತ್ತು ಅವರ ನೌಕರರಿಗೆ ಯಾವುದೇ ಆದ ನಷ್ಟ ಇತ್ಯಾದಿಗಳಿಗೆ ಜವಾಬ್ದಾರರಲ್ಲ.

17. ಟೆಂಡರ್‌ನಲ್ಲಿ ನಮೂದಿಸಿದ ಹಣವು ಅಂದಾಜು ಪಟ್ಟಿಗಳ ಅಂದಾಜು ದರವಾಗಿರುತ್ತದೆ. (ಅಪ್ರಾಕ್ಸಿಮೇಟ್) ಹಣವನ್ನು ಪಾವತಿಸುವಾಗ ಮಂಜೂರಾದ ಅಂದಾಜು ಪಟ್ಟಿಯಂತೆ ಹಣ ಪಾವತಿಸಲಾಗುವುದು.

18. ಕಾಮಗಾರಿಯನ್ನು ಅರಣ್ಯ ಇಲಾಖೆಯಿಂದ ಪರಿಶೀಲಿಸಿ ಮಂಜೂರಾದ ಅಂದಾಜು ಪಟ್ಟಿಯ ಅನುಗುಣವಾಗಿ ಮಾಡಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿ, ಸಹಾಯಕ ಅರಣ್ಯಾಧಿಕಾರಿಗಳು ಇವರು ಕಾಲಕಾಲಕ್ಕೆ ನೀಡುವ ಲಿಖಿತ/ಮೌಖಿಕ ಆದೇಶಕ್ಕನುಗುಣವಾಗಿ ಇರತಕ್ಕದ್ದು. ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ ಅಥವಾ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ದರಾಗಿರಬೇಕಾಗಿರುತ್ತದೆ.

19. ವಲಯ ಅರಣ್ಯಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಕಾರಿಗಳ ನಿರ್ದೇಶನದಂತೆ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು ಗುತ್ತಿಗೆಯ ಅವಧಿಯನ್ನು ಸಾಮಾನ್ಯವಾಗಿ ವಿಸ್ತರಿಸಲಾಗುವುದಿಲ್ಲ. ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು ಅತಿ ವಿಶೇಷ ಸಂದರ್ಭಗಳು ಬಂದಲ್ಲಿ ವಿಸ್ತರಣಾ ಅವಧಿಯಲ್ಲಿ ಮಾಡಿದ ಕೆಲಸಗಳಿಗೆ ಗುತ್ತಿಗೆ ದರಗಳಲ್ಲಿ ಶೇ. 5 ರಂತೆ ಕಡಿತದೊಂದಿಗೆ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುತ್ತಾರೆ. ವಲಯ ಅರಣ್ಯ ಅಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿರವರು ನೀಡಿದ ನಿರ್ದೇಶನದಂತೆ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಕಾಮಗಾರಿಗಳಿಗೆ ಹಣವನ್ನು ಪಾವತಿಸಲಾಗುವುದಿಲ್ಲ ಮತ್ತು ಇಎಂಡಿ ಹಾಗೂ ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

20. ಟೆಂಡರ್‌ನ್ನು ಕಂಪನಿಯ ವತಿಯಿಂದ / ಸಂಘ ಸಂಸ್ಥೆಗಳು ಕೊಡುವ ಪಕ್ಷದಲ್ಲಿ

ಅ) ಕಂಪನಿಯ/ ಸಂಘ ಸಂಸ್ಥೆಗಳ ನೋಂದಾಯಿತ ಸಂಸ್ಥೆಗಳಾಗಿರಬೇಕು.

ಆ) ಕಂಪನಿಯ ಎಲ್ಲಾ ಪಾಲುದಾರರಿಗೆ ಟೆಂಡರ್‌ನ್ನು ಸಹಿ ಮಾಡಲು ಸಾಧ್ಯವಾಗದಿದ್ದಲ್ಲಿ ಟೆಂಡರ್ ಸಹಿ ಮಾಡುವ ವ್ಯಕ್ತಿಯು ಈ ಬಗ್ಗೆ ಅಧಿಕಾರ ಪತ್ರ (Power of Attorney) ಪಡೆದುಕೊಂಡಿರಬೇಕು. ಇಂತಹ ಪತ್ರವನ್ನು ಟೆಂಡರ್‌ಗೆ ಲಗತ್ತಿಸಬೇಕು.

21. ಅರಣ್ಯ ಕೂಲಿಕಾರರ ಸಹಕಾರ ಸಂಘಗಳು ಈ ಕೆಲಸಗಳಿಗೆ ಟೆಂಡರ್ ಕೊಡಲು ಇಚ್ಛಿಸಿದಲ್ಲಿ ಇಎಂಡಿ ಮತ್ತು ಭದ್ರತಾ ಠೇವಣಿಯನ್ನು ಕಡ್ಡಾಯವಾಗಿ ನೀಡಬೇಕಾಗುವುದು ಹಾಗೂ ಸಂಘಗಳ ನೋಂದಣಿ ನಿಯಮದಂತೆ ಸಂಘಗಳೂ ಕಡ್ಡಾಯವಾಗಿ ನೊಂದಣಿಯಾಗಿರಬೇಕು. ಇಲ್ಲವಾದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

22. ಯಶಸ್ವಿ ಟೆಂಡರ್‌ದಾರರು ಕರಾರು ನಾಮೆಯನ್ನು ಸಹಿ ಮಾಡಿದ ನಂತರ ಟೆಂಡರನ್ನು ಹಿಂತೆಗೆದುಕೊಂಡಲ್ಲಿ ನಿಗಧಿತ ಸಮಯದಲ್ಲಿ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ, ಕಾಮಗಾರಿಯ ಬಗ್ಗೆ ನಿರಾಸಕ್ತಿ ಹೊಂದಿದಲ್ಲಿ ಟೆಂಡರ್‌ದಾರರ ಇಎಂಡಿ ಮತ್ತು ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ ಗುತ್ತಿಗೆ ಕೆಲಸವನ್ನು ಮೂಲ ಗುತ್ತಿಗೆದಾರರ ಖರ್ಚು ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಮಾಡಲಾಗುವುದು. ಟೆಂಡರ್‌ಗೆ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963 ಕಾಲಂ 109 ಮತ್ತು 119 ರಂತೆ ಭೂಕಂದಾಯ ಬಾಕಿ ವಸೂಲಿಯಂತೆ ವಸೂಲು ಮಾಡಲಾಗುವುದು.

23. ಯಶಸ್ವಿ ಬಿಡ್ಡುದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಹಣ ಪಾವತಿಸುವಾಗ ಬಿಲ್ಲಿನ ಮೊತ್ತದ ಶೇಕಡ 5 ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಹಿಡಿಯಲಾಗುವುದು. ಈ ಹಣವನ್ನು ನೆಡುತೋಪು ನಿರ್ಮಾಣ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಧೃಡೀಕರಣ ಪತ್ರ ನೀಡಿದ ನಂತರ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವುದು.

24. ಕೆಲಸ ಪೂರ್ಣಗೊಂಡ ದಿನಾಂಕ 1 ವರ್ಷದ ಒಳಗಾಗಿ ಕಾಮಗಾರಿಯಲ್ಲಿ ಯಾವುದೇ ದೋಷ ಕಂಡುಬಂದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ದೋಷ ಪರಿಹರಿಸಬೇಕಾಗುತ್ತದೆ. ನಂತರ ಭದ್ರತಾ ಠೇವಣಿ ಹಿಂತಿರುಗಿಸಲಾಗುವುದು. ತಪ್ಪಿದಲ್ಲಿ ಭದ್ರತಾ ಠೇವಣಿಯಲ್ಲಿ ಸದರಿ ಖರ್ಚನ್ನು ಭರಿಸಲಾಗುವುದು.

25. ಗುತ್ತಿಗೆದಾರರು ನೇಮಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಅಪಘಾತ/ ಇನ್ನಿತರ ಹಾನಿಗಳು ಸಂಭವಿಸಿದಲ್ಲಿ ನಷ್ಟ ಪರಿಹಾರವನ್ನು ಗುತ್ತಿಗೆದಾರರೇ ನೀಡಬೇಕಾಗುತ್ತದೆ.

26. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಲಿಖಿತ ಅನುಮತಿ ಇಲ್ಲದೇ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು.

27. ಟೆಂಡರ್ ಫಾರಂ ನೀಡುವ ದಿನಗಳಲ್ಲಿ ಗುತ್ತಿಗೆದಾರರ ನೋಂದಣಿಯನ್ನು ಮಾಡಲಾಗುವುದಿಲ್ಲ.

28. ಕಾಲ ಕಾಲಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ಇವರು ವಿಧಿಸುವ ಷರತ್ತಿಗೆ ಗುತ್ತಿಗೆದಾರರು ಬದ್ದರಾಗಿರಬೇಕು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಪಿ.ಆರ್. 517 ರಾಮನಗರ ಪ್ರಾದೇಶಿಕ ವಿಭಾಗ,
ರಾಮನಗರ.

[ನಮೂನೆ–1]

**(9ನೇ ನಿಯಮ ನೋಡಿ)**

**ಪೊಲೀಸ್ ಇಲಾಖೆ**

**ಜಿಲ್ಲಾ ಪೊಲೀಸ್ ಕಾರ್ಯಾಲಯ, ಗದಗ**

**ಅಧಿಸೂಚನೆ**

ಶ್ರೀ/ಶ್ರೀಮತಿ **ಆರ್.ಬಿ. ವಡಣ್ಣೆ** ರವರು ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆಯಾಗಿ ಗದಗ ಘಟಕದಲ್ಲಿ ಕೆಲಸ ನಿರ್ವಹಿಸುತ್ತಿದ್ದು ಇವರ ಹೆಸರನ್ನು **ಆರ್.ಬಿ. ಬಿಂಕದಕಟ್ಟಿ** ಎಂದು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಪಿ.ಡಿ. 148 ನೇಮಕಾಧಿಕಾರಿಯವರ ಸಹಿ ಮತ್ತು ಪದನಾಮ

**KARNATAKA STATE ELECTRONICS DEVELOPMENT CORPORATION LTD**

**e-Tendering Mode Only**

**KSEDC/Comml/KBITS/9/08-09, Dated: 16th October 2008**

Keonics invites from eligible venders for the supply, installation & commissioning of Audio Conference facility at chairmen's conference room on turn key basis. Details of this may be viewed on our web site www.keonics.com. Last date for up loading the offer is on 23.10.08 at 3.00 PM. Opened on the same day at 4.30 PM.

P.D. 100 Director (Operations)